## ವ್ಯವಸ್ಥಾಪಕ ನಿರ್ದೇಶಕರವರ ಕಾರ್ಯಾಲಯ

## ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ. ಶಿವಮೊಗ್ಗ

**ಮಾಚೇನಹಳ್ಳಿ., ನಿದಿಗೆ ಅಂಚೆ, ಶಿವಮೊಗ್ಗ 577 222**

ಫ್ಯಾಕ್ಸ್ ನಂ 08182 – 246284 ದೂರವಾಣಿ : 246161, 246162, 246163


**ದ್ವೈವಾರ್ಷಿಕ ಗುತ್ತಿಗೆ ಆಧಾರದ ಮೇಲೆ ಹಾಲು, ಮೊಸರು, ಮಜ್ಜಿಗೆ ಮತ್ತು ತುಪ್ಪವನ್ನು ಪ್ಯಾಕ್ ಮಾಡುವ** FFS (**Form fill & seal**) ಮತ್ತು **HIGH SPEED FFS ಮಾದರಿ ಯಂತ್ರಗಳ ಹಾಗೂ ವೈಂಡಿಂಗ್ ಅಂಡ್ ರೀವೈಂಡಿಗ್, ಇಂಕ್‌ಜೆಟ್ ಪ್ರಿಂಟರ್‌ಗಳ ಚಾಲನೆ, ದುರಸ್ಥಿ ಮತ್ತು ನಿರ್ವಹಣೆ ಗುತ್ತಿಗೆದಾರಿಕೆ೦ಯು**

# ತಾಂತ್ರಿಕ ಮತ್ತು ವಾಣಿಜ್ಯ ಮರುಟೆಂಡರ್ ಪುಸ್ತಕ

**IFT NO:ಸಂಖ್ಯೆ:ಶಿದಾಚಿಹಾಒ:ಪ್ಲಾಂಟ್:ಪ್ರೀ ಪ್ಯಾಕ್: 5615:2022–23** **ದಿನಾಂಕ: 27/09/2022**

## –: <u>ಮರುಟೆಂಡರ್ ಪ್ರಕಟಣೆ:</u> –

**(ಇ–ಪ್ರಕ್ಯೂರ್‌ಮೆಂಟ್ ಮುಖೇನಾ ಮಾತ್ರ – https:eproc.karnataka.gov.in)**

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ. ವ್ಯಾಪ್ತಿಯಲ್ಲಿ ದೈವಾರ್ಷಿಕ ಗುತ್ತಿಗೆ ಆಧಾರದ ಮೇಲೆ ಹಾಲು, ಮೊಸರು, ಮಜ್ಜಿಗೆ, ಲಸ್ಸಿ ಮತ್ತು ತುಪ್ಪವನ್ನು ಪ್ಯಾಕ್ ಮಾಡುವ FFS (Form fill & seal) **ಮತ್ತು** **HIGH SPEED FFS** ಮಾದರಿ ಯಂತ್ರಗಳ ಹಾಗೂ ವೈಂಡಿಂಗ್ ಅಂಡ್ ರಿವೈಂಡಿಂಗ್ ಯಂತ್ರಗಳು, ಇಂಕ್‌ಜೆಟ್ ಟೆಂಡರ್) ಅರ್ಹ ಟೆಂಡರ್‌ದಾರರಿಂದ ಎರಡು ವರ್ಷದ ಅವಧಿಗೆ ಹಾಲು, ಮೊಸರು, ಮಜ್ಜಿಗೆ ಮತ್ತು ತುಪ್ಪವನ್ನು ಪ್ಯಾಕ್ ಮಾಡುವFFS (Form fill & seal) ಮತ್ತು HIGH SPEED FFSಮಾದರಿ ಯಂತ್ರಗಳು ಹಾಗೂ ಕೋಡಿಂಗ್(ವೈಂಡಿಂಗ್ ಅಂಡ್ ರಿವೈಂಡಿಂಗ್ ಹಾಗೂ ಇಂಕ್‌ಜೆಟ್ ಪ್ರಿಂಟರ್)ಯಂತ್ರಗಳ ಚಾಲನೆ, ದುರಸ್ಥಿ ಮತ್ತು ನಿರ್ವಹಣೆ ಕೆಲಸದಲ್ಲಿ ಅರ್ಹ ಅನುಭವವುಳ್ಳ ಟೆಂಡರುದಾರರಿಂದ(ಪ್ರಾದೇಶಿಕ ಭವಿಷ್ಯನಿಧಿ ಕಛೇರಿ ಮತ್ತು ನೌಕರರ ರಾಜ್ಯ ವಿಮಾ ಇಲಾಖೆಯ ನೊಂದಣಿ, ಕಾರ್ಮಿಕ ಇಲಾಖೆಯಿಂದ ಪರವಾನಗಿ ಹಾಗೂ ಸರಕು ಮತ್ತು ಸೇವ ತೆರಿಗೆ (ಜಿ.ಎಸ್.ಟಿ), ಪ್ರೂಫೆಷನಲ್ ಟ್ಯಾಕ್ಸ್, ಇನ್ಕಂ ಟ್ಯಾಕ್ಸ್ ಪಾವತಿದಾರರು / ನೊಂದಣಿಹೊಂದಿರುವ)ಇ–ಪ್ರಕ್ಯೂರ್‌ಮೆಂಟ್ ಮುಖೇನಾ ಮರುಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

| ಕೆಲಸದ ವಿವರ | ದೈವಾರ್ಷಿಕ ಅಂದಾಜು ಟೆಂಡರ್ ಮೌಲ್ಯ | ನಿಗದಿತ ಇ.ಎಂ.ಡಿ. |
|---|---|---|
| ಶಿವಮೊಗ್ಗ ಡೇರಿ ಹಾಗೂ ದಾವಣಗೆರೆ ಡೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು 17 ಡಬಲ್ ಹೆಡ್ 01 ಸಿಂಗಲ್ ಹೆಡ್ (ಜಂಬೂ) ಹಾಲು, ಮೊಸರು, ಮಜ್ಜಿಗೆ, ಲಸ್ಸಿ, ತುಪ್ಪ ಪ್ಯಾಕಿಂಗ್ ಯಂತ್ರಗಳನ್ನು ಮತ್ತು 3ಸಂಖ್ಯೆ ಕೋಡಿಂಗ್ (ವೈಂಡಿಂಗ್ ಅಂಡ್ ರಿವೈಂಡಿಂಗ್ ಹಾಗೂ ಇಂಕ್‌ಜೆಟ್ ಪ್ರಿಂಟರ್) ಯಂತ್ರಗಳನ್ನು ದೈವಾರ್ಷಿಕ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಚಾಲನೆ, ದುರಸ್ಥಿ ಮತ್ತು ನಿರ್ವಹಣೆಯ ಗುತ್ತಿಗೆದಾರಿಕೆ. ದಿನವೊಂದಕ್ಕೆ ಅಂದಾಜು 3.10 ಲಕ್ಷ ಲೀಟರ್ | ರೂ.220 ಲಕ್ಷಗಳು | ರೂ.5,50,000/– |

ಇ–ಪ್ರೊಕ್ಯರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜುಗಳು ಲಭ್ಯವಾಗುವ ದಿನಾಂಕ: 29/09/2022

1. ಟೆಂಡರ್ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕ:17/10/2022 ಸಂಜೆ 17.50 ಘಂಟೆಯ ವರಗೆ
2. ಪೂರ್ವಭಾವಿ ಸಭೆಯ ದಿನಾಂಕ: 07/10/2022 ಮತ್ತು 2.30 ಘಂಟೆ ಸ್ಥಳ:ಶಿವಮೊಗ್ಗ ಡೇರಿ, ಮಾಚೇನಹಳ್ಳಿ, ನಿಧಿಗೆ ಶಿವಮೊಗ್ಗ.
3. ಟೆಕ್ನಿಕಲ್ ಟೆಂಡರ್ ತೆರೆಯುವ ದಿನಾಂಕ:19/10/2022 ಬೆಳಿಗ್ಗೆ 11.30 ಘಂಟೆಗೆ,
4. ಕಮರ್ಷಿಯಲ್ ಟೆಂಡರ್ ತೆರೆಯುವ ದಿನಾಂಕವನ್ನು ತಿಳಿಸಲಾಗುವುದು.

ಈ ಟೆಂಡರ್‌ಗೆ ಸಂಬಂಧಿಸಿದಂತೆ, ಇನ್ನೂ ಹೆಚ್ಚಿನ ಮಾಹಿತಿಗಳು ಮತ್ತು ವಿವರಗಳು ಅಗತ್ಯವಿದ್ದಲ್ಲಿ ಒಕ್ಕೂಟದ ವೆಬ್ ಸೈಟ್:www.shimul.coopನಲ್ಲಿ ಅಥವಾ ಕೆಲಸದ ವೇಳೆಯಲ್ಲಿ ಖುದ್ದಾಗಿ ಬಂದು ಕಛೇರಿಯಲ್ಲಿ ಪಡೆಯಬಹುದಾಗಿರುತ್ತದೆ. ಕಚೇರಿ ದೂರವಾಣಿ ಸಂಖ್ಯೆ : 9071385666, e-mail: shimuldairymanager@gmail.com

ವ್ಯವಸ್ಥಾಪಕ ನಿರ್ದೇಶಕರು
**ಶಿವ**ಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ
ಸಹಕಾರ ಹಾಲು ಒಕ್ಕೂಟ ನಿ.,

## ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ ಮಾಚೇನಹಳ್ಳಿ, ನಿದಿಗೆ (ಅಂಚೆ), ಶಿವಮೊಗ್ಗ–577222

---

ಶಿವಮೊಗ್ಗ ಮತ್ತು ದಾವಣಗೆರೆ ಡೇರಿಯಲ್ಲಿ ದ್ವೈವಾರ್ಷಿಕ ಗುತ್ತಿಗೆ ಆಧಾರದ ಮೇಲೆ ಹಾಲು, ಮೊಸರು, ಮಜ್ಜಿಗೆ ಮತ್ತು ತುಪ್ಪವನ್ನು ಪ್ಯಾಕ್ ಮಾಡುವ FFS (Form fill & seal) ಮತ್ತು HIGH SPEED FFS ಮಾದರಿ ಯಂತ್ರಗಳ ಹಾಗೂ ವೈಂಡಿಂಗ್ ಅಂಡ್ ರೀವೈಂಡಿಗ್, ಇಂಕ್‌ಜೆಟ್ ಪ್ರಿಂಟರ್‌ಗಳ ಚಾಲನೆ, ದುರಸ್ಥಿ ಮತ್ತು ನಿರ್ವಹಣೆ ಗುತ್ತಿಗೆಯ ಬಗ್ಗೆ

**–: <u>ಟೆಂಡರ್ ಫಾರಂನೊಂದಿಗೆ ಲಗತ್ತಿಸಿದ ದಾಖಲೆಗಳು</u> :–**

ಅನುಬಂಧ – ಎ : ಇ–ಟೆಂಡರ್ ಪ್ರಕಟಣೆ

**ಟೆಕ್ನಿಕಲ್ ಟೆಂಡರ್ ಫಾರಂ ಭಾಗ – 1**

| | | |
|---|---|---|
| ಅನುಬಂಧ – ಸಿ | : | ಟೆಂಡರ್‌ಗೆ ಸಂಬಂಧಿಸಿದ ನಿಬಂಧನೆಗಳು (ಒಪ್ಪಿ ಸಹಿ ಮಾಡಿ ಲಗತ್ತಿಸುವುದು.) |
| ಅನುಬಂಧ–ಡಿ | : | ದ್ವೈವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುವ ಬಗ್ಗೆ ಷರತ್ತು ಮತ್ತು ನಿಬಂಧನೆಗಳು. (ಒಪ್ಪಿ ಸಹಿ ಮಾಡಿ ಲಗತ್ತಿಸುವುದು.) |
| ಅನುಬಂಧ – ಇ | : | ಕೆಲಸದ ವಿವರಣೆ (ಗಮನಿಸಿದಕ್ಕೆ ಸಹಿ ಮಾಡಿ ಲಗತ್ತಿಸುವುದು.) |
| ಅನುಬಂಧ – ಎಫ್ | : | ಟೆಂಡರುದಾರರ ವಿವರ ಬರೆದು ಸಹಿ ಮಾಡಿ ಲಗತ್ತಿಸುವುದು |
| ಅನುಬಂಧ – ಜಿ | : | ಟೆಂಡರುದಾರರು ಗುತ್ತಿಗೆಯನ್ನು ಹೊಂದಿರುವ ಅನುಭವ ಪ್ರಮಾಣ ಪತ್ರ (ದೃಢೀಕರಣದೊಂದಿಗೆ) |
| ಅನುಬಂಧ – ಹೆಚ್ | : | ಸಲ್ಲಿಸಬೇಕಾದ ದಾಖಲಾತಿಗಳ ಚೆಕ್‌ಲಿಸ್ಟ್ (ದಾಖಲಾತಿಗಳನ್ನು ಲಗತ್ತಿಸುವುದು.) |

ವಾಣಿಜ್ಯ ಟೆಂಡರು ಭಾಗ – 2 ಕೆಳಕಂಡವುಗಳನ್ನು ಒಳಗೊಂಡಿರುತ್ತದೆ.

ಎ. ವಾಣಿಜ್ಯ ಟೆಂಡರು ದರ ಪ್ರಸ್ತಾಪ.

ಬಿ. ವಾಣಿಜ್ಯ ಟೆಂಡರು ದರ ಅನುಸೂಚಿ (Price Schedule)

<u>[ಟಿಪ್ಪಣಿ: ಟೆಂಡರ್ ಸಲ್ಲಿಸುವ ಪೂರ್ವದಲ್ಲಿ ಇಚ್ಛೆಯುಳ್ಳ ಟೆಂಡರ್‌ದಾರರು ಹಾಲಿ ನಡೆಯುತ್ತಿರುವ ಕೆಲಸ ಹಾಗೂ ಯಂತ್ರಗಳನ್ನು ಅಧಿಕಾರಿಗಳ ಅನುಮತಿ ಪಡೆದು ಕೆಲಸದ ವೇಳೆಯಲ್ಲಿ ದಾವಣಗೆರೆ ಮತ್ತು ಶಿವಮೊಗ್ಗ ಡೇರಿಗಳಲ್ಲಿ ಖುದ್ದಾಗಿ ಪರಿಶೀಲಿಸಬಹುದಾಗಿದೆ.]</u>

# ಅನುಬಂಧ – ಸಿ

## <u>ತಾಂತ್ರಿಕ ಮತ್ತು ವಾಣಿಜ್ಯ ಟೆಂಡರಿನ ಷರತ್ತು ಮತ್ತು ನಿಬಂಧನೆಗಳು</u>

**1.** <u>ಟೆಂಡರ್ ಸಲ್ಲಿಸುವ ವಿಧಾನ:–</u>

**ಎ)** ಟೆಕ್ನಿಕಲ್ ಟೆಂಡರ್ ಭಾಗ–1 ನ್ನು ತುಂಬಿ ಅದರೊಂದಿಗೆ ಸಂಬಂಧಿಸಿದ ದಾಖಲೆಗಳನ್ನು ಇ–ಟೆಂಡರ್ ಮೂಲಕ ಭರ್ತಿ ಮಾಡಿ ಸಲ್ಲಿಸುವುದು.

ಬಿ) ಕಮರ್ಷಿಯಲ್ ಟೆಂಡರ್ ಭಾಗ–2 ಅನ್ನು ಇ–ಟೆಂಡರ್ ಮೂಲಕ ಭರ್ತಿ ಮಾಡಿ ಸಲ್ಲಿಸುವುದು.

**2.** <u>ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ</u> : ಇ– ಟೆಂಡರ್ ಪ್ರಕಟಣೆಯಲ್ಲಿದ್ದಂತೆ.

3. <u>ಟೆಂಡರ್ ಸಲ್ಲಿಸಲು ಅರ್ಹತೆ:</u>

ಎ) ಸಂವೇದಕರ ನಿಧಿ (EMD), ಕಾರ್ಮಿಕರ ಭವಿಷ್ಯನಿಧಿ (EPF), ನೌಕರರ ರಾಜ್ಯ ವಿಮಾ (ESI) ಕೋಡ್ ನಂಬರ್, ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ 1961ರ ಪ್ರಕಾರ ಪಡೆದ ಪ್ರಮಾಣ ಪತ್ರ(ಫಾರಂ–ಸಿ), ಸರಕು ಮತ್ತು ಸೇವಾ ತೆರಿಗೆ (GST), ಪ್ರೊಫೆಷನಲ್ ಟ್ಯಾಕ್ಸ್ ಮತ್ತು ಇನ್‌ಕಂಟ್ಯಾಕ್ಸ್ ಪಾವತಿದಾರರು /ನೊಂದಣಿ ಪ್ರಮಾಣ ಪತ್ರಗಳನ್ನು ಹಾಗೂ ಪಾನ್ ಕಾರ್ಡ್ ಹೊಂದಿರಬೇಕು.

ಬಿ) ದಿನವಹಿ 2 ಲಕ್ಷ ಲೀ. ಸಾಮರ್ಥ್ಯವಿರುವ ಡೇರಿ / ಆಹಾರ ಉತ್ಪಾದನಾ ಘಟಕಗಳಲ್ಲಿ ದಿನವಹಿ 2 ಲಕ್ಷ ಲೀ. ಹಾಲು ಮೊಸರು, ಮಜ್ಜಿಗೆ ತುಪ್ಪ ಪ್ಯಾಕಿಂಗ್ ಮಾಡಿರುವ ಅನುಭವ ಹಾಗೂ ಈ ಸಂಬಂಧ FFS & **High speed PLC based fully automataed FFS** ಯಂತ್ರಗಳ ಚಾಲನೆ ಮತ್ತು ನಿರ್ವಹಣೆ ಅನುಭವ ಇತ್ತೀಚಿನ ಕನಿಷ್ಠ ಎರಡು ವರ್ಷದ 02 ಲಕ್ಷ ಲೀ ಪ್ಯಾಕ್ ಮಾಡಿದ ಹೊಂದಿರಬೇಕು ಇದರ ಬಗ್ಗೆ ಸಂಬಂಧಿಸಿದ ಸಂಸ್ಥೆಗಳಿಂದ ತೃಪ್ತಿಕರ ಸೇವಾ ದೃಢೀಕರಣ ಪತ್ರ ಹೊಂದಿರುವವರು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.

ಸಿ) ಗುತ್ತಿಗೆ ಕೆಲಸಗಳನ್ನು ನಿರ್ವಹಿಸಲು ಟೆಂಡರ್‌ದಾರರು ಕಾಂಟ್ರಾಕ್ಟ್ ಲೇಬರ್ ಲೈಸೆನ್ಸ್ (ಫಾರ0–6) ಹೊಂದಿದವರಾಗಿರಬೇಕು ಮತ್ತು ಚಾಲ್ತಿಯಲ್ಲಿರಬೇಕು. (ಕಾನೂನು ಸಮತವಾದ ಮಾನ್ಯತೆ ಪಡೆದಿರುವ ಲೇಬರ್ ಲೈಸೆನ್ಸ್‌ನ್ನು ಹೊಂದಿರಬೇಕು).

ಡಿ) ಈ ಹಿಂದೆ ಒಕ್ಕೂಟದಲ್ಲಿ ಗುತ್ತಿಗೆದಾರರು ಯಾವುದೇ ಗುತ್ತಿಗೆ ಸೇವೆ ಸಲ್ಲಿಸಿದ್ದು ಆಗ ಅವರ ಸೇವೆಯು ತೃಪ್ತಿಕರವಾಗಿಲ್ಲವೆಂದು ಪರಿಗಣಿಸಲ್ಪಟ್ಟಿದ್ದಲ್ಲಿ ಅಥವಾ ಕಾರ್ಮಿಕರಿಗೆ ಕಾರ್ಮಿಕರ ಭವಿಷ್ಯನಿಧಿ (EPF), ನೌಕರರ ರಾಜ್ಯ ವಿಮಾ (ESI) ವಂತಿಕೆಯನ್ನು ಸರಿಯಾಗಿ (ಕ್ರಮಬದ್ದವಾಗಿ) ಪಾವತಿಸದಿರುವ ಬಗ್ಗೆ ಮಾಹಿತಿ ದೊರೆತಲ್ಲಿ ಅಥವಾ ಗುತ್ತಿಗೆದಾರರ ಸೇವೆಯ ಬಗ್ಗೆ ಬೇರೆ ಘಟಕ/ಒಕ್ಕೂಟಗಳಲ್ಲಿ ಆಕ್ಷೇಪಣೆ/ಅತೃಪ್ತಕರ ಇದ್ದಲ್ಲಿ ಅಂತಹ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುವುದಿಲ್ಲ.

ಇ) ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ವತಿಯಿಂದ ಪಡೆದ ನಿಗದಿತ ದಸ್ತಾವೇಜಿನಲ್ಲಿ ಮಾತ್ರ ಟೆಂಡರನ್ನು ಸಲ್ಲಿಸುವುದು.

ಎಫ್) ಟೆಂಡರು ದಸ್ತಾವೇಜಿನಲ್ಲಿ ಇರುವ ಎಲ್ಲಾ ಸೂಚನೆಗಳು, ನಮೂನೆಗಳು, ವಿಶಿಷ್ಟ ವಿವರಣೆ (Specification) ಷರತ್ತು ಮತ್ತು ನಿಬಂಧನೆಗಳು ಇವುಗಳನ್ನು ಟೆಂಡರುದಾರರು ಅಧ್ಯಯನ ಮಾಡಿ ಮನವರಿಕೆ ಮಾಡಿಕೊಂಡು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಪೂರ್ವಾನುಮತಿಯೊಂದಿಗೆ ಕೆಲಸದ ಸ್ಥಳಕ್ಕೆ ಭೇಟಿ ನೀಡಿ ನಿರ್ವಹಿಸಬೇಕಾದ ಕೆಲಸಗಳನ್ನು ಖುದ್ದಾಗಿ ನೋಡಿ ಅದಕ್ಕೆ ಬೇಕಾದ ಸಂಪೂರ್ಣ ಮಾಹಿತಿಯನ್ನು ಶಿವಮೊಗ್ಗ ದಾವಣಗೆರೆ & ಚಿತ್ರ್ರದುರ್ಗ ಜಿಲ್ಲಾ ಹಾಲು ಒಕ್ಕೂಟದ ಅಧಿಕಾರಿಗಳಿಂದ ಪಡೆದು ಕೆಲಸದ ವ್ಯಾಪ್ತಿ, ಕೆಲಸಗಾರರಿಗೆ ನೀಡಬೇಕಾದ ಶಾಸನಬದ್ಧ ಸೌಲಭ್ಯಗಳ ಬಗ್ಗೆ ಮನವರಿಕೆ ಮಾಡಿಕೊಂಡು ನಂತರ ಟೆಂಡರು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದರ ನಮೂದಿಸುವುದು. ಕೆಲಸದ ವಿವರಣೆಯಲ್ಲಿ ನಮೂದಿಸಿರುವ ಕೆಲಸದ ವ್ಯಾಪ್ತಿಯು ಕೇವಲ ಸೂಚ್ಯವಾಗಿದ್ದು (Indicative) ವ್ಯಾಪಕವಲ್ಲ (Exhaustive).

ಜಿ) ಟೆಂಡರು ದಸ್ತಾವೇಜಿನಲ್ಲಿರುವಂತೆ ಅವಶ್ಯವಿರುವ ಎಲ್ಲಾ ಮಾಹಿತಿಯನ್ನು ಒದಗಿಸಲು ವಿಫಲವಾದಲ್ಲಿ ಅಥವಾ ಟೆಂಡರು ದಸ್ತಾವೇಜಿಗನುಗುಣವಾಗಿ ಎಲ್ಲಾ ವಿಧದಲ್ಲಿ ವಾಸ್ತವಿಕವಾಗಿ ಪ್ರತಿಕ್ರಿಯಿಸುವ (Substantially responsive)ರೀತಿಯಲ್ಲಿರುವ ಟೆಂಡರನ್ನು ಸಲ್ಲಿಸದಿದ್ದಲ್ಲಿ ಅದು ಟೆಂಡರುದಾರರು ನಮೂದಿಸಿದ:ಸಲ್ಲಿಸಿದ ಮಾಹಿತಿ ಸುಳ್ಳು ಎಂದು ಪರಿಶೀಲನೆಯ ಸಂದರ್ಭದಲ್ಲಿ ಕಂಡುಬಂದಲ್ಲಿ ಯಾವುದೇ ನೋಟಿಸ್ ನೀಡದೆ ಟೆಂಡರನ್ನು ತಿರಸ್ಕರಿಸಲಾಗುವುದು: ಗುತ್ತಿಗೆಯನ್ನು ರದ್ದುಗೊಳಿಸಲಾಗುವುದು.

ಮೇಲಿನ ಷರತ್ತು/ನಿಬಂಧನೆಗಳನ್ನು ನಾನು ಒಪ್ಪಿರುತ್ತೇನೆ/ನಾವು ಒಪ್ಪಿರುತ್ತೇವೆ.

ಟೆಂಡರುದಾರರ ಸಹಿ ಮತ್ತು ಮೋಹರು

ಹೆಚ್)ಟೆಂಡರ್‌ನ್ನು ಸಲ್ಲಿಸುವ ಟೆಂಡರ್‌ದಾರರ ನಿಕಟ ಹಿಂದಿನ ಮೂರು ವರ್ಷದ ಆರ್ಥಿಕ ವರ್ಷಗಳಲ್ಲಿ ವಾರ್ಷಿಕ ವಹಿವಾಟು (Turnover)ಕನಿಷ್ಠ ರೂ.1.5/– ಕೋಟಿ ವ್ಯವಹಾರ ಹೊಂದಿರಬೇಕು. ಇದಕ್ಕೆ ಸಂಬಂಧಿಸಿದಂತೆ ಆರ್ಥಿಕ ತಃಖ್ತೆಗಳು (Audited and balance sheet) ಲಗತ್ತಿಸತಕ್ಕದು.

ಐ) ಗುತ್ತಿಗೆದಾರರು ಸ್ವತಃ ಡಿಪ್ಲೋಮೊ/ಪದವಿಯಲ್ಲಿ ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್/ ಎಲೆಕ್ಟ್ರಾನಿಕ್ಸ್ & ಕಮ್ಯುನಿಕೇಷನ್/ಮೆಕ್ಯಾನಿಕಲ್ ತಾಂತ್ರಿಕ ನಿದ್ಯಾರ್ಹತೆಯುಳ್ಳವರಾಗಿರಬೇಕು.

ಜೆ) ಗುತ್ತಿಗೆ ಪಡೆಯುವವರು 25 ರಿಂದ 30 ಅರೆಕುಶಲ ಮತ್ತು 4 ಕುಶಲ ಸಿಬ್ಬಂದಿಯನ್ನು ಹೊಂದಿರಬೇಕು. ಸದರಿ ಸಿಬ್ಬಂದಿ ಗುರುತಿನ ಚೀಟಿ ಹೊಂದಿರಬೇಕು.

ಕೆ) ಆಕ್ಷೇಪಣೆ / ದೂರುಗಳಿಲ್ಲದೆ ಗುತ್ತಿಗೆದಾರಿಕೆ ಅಡಿಯಲ್ಲಿ ನಿರ್ದಿಷ್ಟ ಸಂಖ್ಯೆಯಲ್ಲಿ ಕೆಲಸಗಾರರನ್ನು ಹಾಗೂ ಸಮರ್ಪಕ ಯಂತ್ರಗಳ ನಿರ್ವಹಣೆ ಮಾಡಿರುವ ಬಗ್ಗೆ ಗುತ್ತಿಗೆ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಯ ಹೆಸರು, ಅವಧಿ, ಕೆಲಸಗಾರರ ಸಂಖ್ಯೆ, ಸದರಿ ಸಂಸ್ಥೆಗಳಲ್ಲಿ ಸಂಪರ್ಕಿಸಬೇಕಾದ ಅಧಿಕಾರಿಯ ಹೆಸರು, ದೂರವಾಣಿ ಸಂಖ್ಯೆಗಳನ್ನು ಒದಗಿಸುವ ಮೂಲಕ ರುಜುವಾತು ಪಡಿಸುವುದು.

**4 ಟೆಂಡರು ದಸ್ತಾವೇಜುಗಳ ತಿದ್ದುಪಡಿ :**

4.1 ಟೆಂಡರು ದಸ್ತಾವೇಜುಗಳ ಸಲ್ಲಿಕೆಯ ನಂತರ ಅಥವಾ ಟೆಂಡರನ್ನು ತೆರೆಯುವ ಮೊದಲು ಯಾವುದೇ ಸಂದರ್ಭದಲ್ಲಿ ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು ಯಾವುದೇ ಕಾರಣಗಳಿಗೆ ಸ್ವತಃ ತಾನೇ ಮುಂದಾಗಿ ಅಥವಾ ಭಾವೀ ಟೆಂಡರುದಾರರು ಸ್ಪಷ್ಟೀಕರಣಕ್ಕಾಗಿ ಮಾಡಿದ ಮನವಿಗೆ ಪ್ರತಿಕ್ರಿಯೆಯಾಗಲೀ ಟೆಂಡರು ದಸ್ತಾವೇಜುಗಳಿಗೆ ಯಾವುದೇ ಬದಲಾವಣೆಗಳು, ಮಾರ್ಪಾಡುಗಳು ಅಥವಾ ತಿದ್ದುಪಡಿಗಳು ಇವುಗಳನ್ನು ಮಾಡುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

4.2 ಟೆಂಡರು ದಸ್ತಾವೇಜುಗಳಲ್ಲಿ ಬದಲಾವಣೆ / ತಿದ್ದುಪಡಿಗಳು ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ತಿಳಿಸಲಾಗುವುದು.

4.3 ಭಾವಿ ಟೆಂಡರುದಾರರುಗಳಿಗೆ ಟೆಂಡರು ತಿದ್ದುಪಡಿಯನ್ನು ಪರಿಗಣಿಸಲು ಸೂಕ್ತವಾದ ಸಮಯವನ್ನು ನೀಡಲು ಸಾಧ್ಯವಾಗುವಂತೆ ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ತನ್ನ ವಿವೇಚನೆಯ ಮೇರೆಗೆ ಟೆಂಡರು ಸಲ್ಲಿಸಲು ನಿಗದಿಪಡಿಸಿದ ದಿನಾಂಕವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಚಾರ ನೀಡಿ ಮುಂದುಡೂವ ಅಧಿಕಾರವನ್ನು ಒಕ್ಕೂಟವು ಹೊಂದಿರುತ್ತದೆ.

**5 ನಿಗದಿತ ದರ :**

ಟೆಂಡರುದಾರರು ದರ ಪ್ರಸ್ತಾಪದಲ್ಲಿ ನಮೂದಿಸಿದ ನಂತರ ಅಂತಿಮಗೊಳಿಸುವ ದರವು ಗುತ್ತಿಗೆಯು ಸಿಂಧುವಾಗಿರುವ ಎರಡು ವರ್ಷಗಳು ಹಾಗೂ ವಿಸ್ತರಿಸಬಹುದಾದ ಮೂರು ತಿಂಗಳು ಒಟ್ಟು ಎರಡು ವರ್ಷ ಮೂರು ತಿಂಗಳ ಅವಧಿಗೆ ಅವಕಾಶವಿರುತ್ತದೆ.

**6 ಮುಂಗಡ ಹಣ ಠೇವಣಿ (EMD):**

6.1 ಯಶಸ್ವಿಯಾಗದ ಟೆಂಡರುದಾರರ ಅರ್ನೆಸ್ಟ್ ಹಣ ಠೇವಣಿಯನ್ನು ಸಾಧ್ಯವಾದಷ್ಟು ಬೇಗ ಅಂದರೆ ಟೆಂಡರು ಸಿಂಧುತ್ವ ಅವಧಿ ಮುಗಿದ ನಂತರ 30 ದಿನಗಳಲ್ಲಿ ಬಿಡುಗಡೆಗೊಳಿಸಲಾಗುವುದು. ಅರ್ನೆಸ್ಟ್ ಹಣ ಠೇವಣಿಗೆ ಯಾವುದೇ ರೀತಿಯ ಬಡ್ಡಿ ನೀಡಲಾಗುವುದಿಲ್ಲ.

6.2ಯಶಸ್ವಿ ಟೆಂಡರುದಾರರ ಅರ್ನೆಸ್ಟ್ ಹಣ ಠೇವಣಿಯನ್ನು ಟೆಂಡರುದಾರರು ಗುತ್ತಿಗೆ ಒಪ್ಪಂದವನ್ನು ಮಾಡಿಕೊಂಡ ಮತ್ತು ಭದ್ರತಾ ಠೇವಣಿಯನ್ನು ಸಲ್ಲಿಸಿದ ನಂತರ ಬಿಡುಗಡೆಗೊಳಿಸಲಾಗುವುದು.

6.3ಅರ್ನೆಸ್ಟ್ ಹಣ ಠೇವಣಿ ಮಟ್ಟುಗೋಲು :

ಟೆಂಡರುದಾರರು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು ನಿಗದಿಪಡಿಸಿದ ಟೆಂಡರು ಸಿಂಧುವಾಗಿರುವ ಅವಧಿಯಲ್ಲಿ ದರವನ್ನು ನಮೂದಿಸಿರುವ ಟೆಂಡರನ್ನು ಗೌರವಿಸಲು ವಿಫಲರಾದಲ್ಲಿ ಅಥವಾ ದರ ಪ್ರಸ್ತಾಪವನ್ನು (Price offer) ವಾಪಸ್ಸು ಪಡೆದಲ್ಲಿ ಅಥವಾ ಯಶಸ್ವಿ ಟೆಂಡರುದಾರರ ಪ್ರಕರಣದಲ್ಲಿ:

1. ಗುತ್ತಿಗೆ ಒಪ್ಪಂದವನ್ನು ಮಾಡಿಕೊಳ್ಳಲು ಟೆಂಡರುದಾರರು ವಿಫಲರಾದಲ್ಲಿ.
2. ಭದ್ರತಾ ಠೇವಣಿಯನ್ನು ಸಲ್ಲಿಸಲು ಟೆಂಡರುದಾರರು ವಿಫಲರಾದಲ್ಲಿ.

ಈ ರೀತಿ ಸಂವೇದಕರ ನಿಧಿ (EMD) ಮುಟ್ಟುಗೋಲು ಹಾಕಿಕೊಂಡ ಗುತ್ತಿಗೆದಾರರು ಮುಂದಿನ 5 ವರ್ಷಗಳ ಅವಧಿಗೆ ಒಕ್ಕೂಟದ ಯಾವುದೇ ಟೆಂಡರ್‌ನಲ್ಲಿ ಪಾಲ್ಗೊಳ್ಳಲು ಅರ್ಹರಿರುವುದಿಲ್ಲ.

ಮೇಲಿನ ಷರತ್ತು / ನಿಬಂಧನೆಗಳನ್ನು ನಾನು ಒಪ್ಪಿರುತ್ತೇನೆ / ನಾವು ಒಪ್ಪಿರುತ್ತೇವೆ.

ಟೆಂಡರುದಾರರ ಸಹಿ ಮತ್ತು ಮೋಹರು

6.4 ಈ ಹಿಂದೆ ಸಲ್ಲಿಸಿದ್ದ ಅರ್ನೆಸ್ಟ್ ಹಣ ಠೇವಣಿ ಮೊತ್ತ ಅಥವಾ ಭದ್ರತಾ ಠೇವಣಿ ಇದ್ದಲ್ಲಿ ಅದನ್ನು ಪ್ರಸಕ್ತ ಟೆಂಡರಿಗೆ ವರ್ಗಾಯಿಸಲು ಅವಕಾಶವಿಲ್ಲ. ಆದ್ದರಿಂದ ಟೆಂಡರಿನೊಂದಿಗೆ ಹೊಸದಾಗಿ ಅರ್ನೆಸ್ಟ್ ಹಣವನ್ನು ಕಡ್ಡಾಯವಾಗಿ ಸಲ್ಲಿಸಬೇಕು.

**7 ಟೆಂಡರು ಸಿಂಧುತ್ವ ಅವಧಿ :**

7.1 ವಾಣಿಜ್ಯ ಟೆಂಡರು ಭಾಗ-2 ನಮೂದಿಸಿರುವ ದರವು ತಾಂತ್ರಿಕ ಟೆಂಡರು ಭಾಗ-1 ತೆರೆದ ನಂತರ 90 ದಿನಗಳವರೆಗೆ ಸಿಂಧುವಾಗಿರಬೇಕು.

7.2 ವಿಶೇಷ ಸಂದರ್ಭಗಳಲ್ಲಿ ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು ಟೆಂಡರು ಸಿಂಧುತ್ವ ಅವಧಿಯನ್ನು ವಿಸ್ತರಿಸುವ ಬಗ್ಗೆ ಟೆಂಡರುದಾರರ ಸಮ್ಮತಿಗಾಗಿ ಕೇಳಿಕೊಳ್ಳಬಹುದು.

**8. ಟೆಂಡರು ದಸ್ತಾವೇಜುಗಳ ಸಹಿ :**

8.1 ಟೆಂಡರುದಾರರು ತಾಂತ್ರಿಕ ಟೆಂಡರು ಭಾಗ-1 ಮತ್ತು ವಾಣಿಜ್ಯ ಟೆಂಡರು ಭಾಗ-2 ಇವುಗಳ ಮೂಲ ಪ್ರತಿಗಳಲ್ಲಿ ತಾವೇ ಸಹಿ ಮಾಡಬೇಕು. ಅಥವಾ ಟೆಂಡರುದಾರರನ್ನು ಗುತ್ತಿಗೆಗೆ ಬದ್ಧಗೊಳಿಸುವ ಅಧಿಕೃತಗೊಂಡ ವ್ಯಕ್ತಿಗಳು ಸಹಿ ಮಾಡಬೇಕು. ಯಾವುದೇ ಜಾಗಗಳನ್ನು ಖಾಲಿ ಬಿಡಬಾರದು. ಈ ಬಗ್ಗೆ ಸಂದೇಹ ಇದ್ದಲ್ಲಿ ಅಥವಾ ವಾಣಿಜ್ಯ ದರ ಅನುಸೂಚಿ ಹೊರತುಪಡಿಸಿ ಟೆಂಡರು ದಸ್ತಾವೇಜು ಭರ್ತಿ ಮಾಡಲು ಸಹಾಯ ಅಗತ್ಯವಿದ್ದಲ್ಲಿ ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಪ್ರಿ-ಪ್ಯಾಕ್ ವಿಭಾಗವನ್ನು ಸಂಪರ್ಕಿಸಬಹುದು. ಟೆಂಡರು ದಸ್ತಾವೇಜಿನ ಎಲ್ಲಾ ಪುಟಗಳಿಗೂ ತಪ್ಪದೇ ಸಹಿ ಮಾಡಿ ಅಪ್‌ಲೋಡ್ ಮಾಡುವುದು.

8.2 ಯಾವುದೇ ತಿದ್ದುಪಡಿ, ಹೊಡೆದು ಹಾಕಿರುವುದನ್ನು ಟೆಂಡರುದಾರರು ಅಥವಾ ಅಧಿಕೃತ ಸಹಿದಾರರು ದೃಢೀಕರಿಸಿ ಸಹಿ ಮಾಡಿ ಅಪ್‌ಲೋಡ್ ಮಾಡಬೇಕು.

**9 ಟೆಂಡರುಗಳನ್ನು ತೆರೆಯುವುದು :**

9.1 ವಾಣಿಜ್ಯ ಟೆಂಡರು ತೆರೆಯುವ ಹಾಗೂ ದರ ನಿಷ್ಕರ್ಷೆ ಮಾಡುವ ದಿನಾಂಕವನ್ನು ತಾಂತ್ರಿಕ ಟೆಂಡರು ತೆರೆಯುವ ದಿನಾಂಕದಂದು ನಿರ್ಧರಿಸಲಾಗುವುದು.

9.2 ಟೆಂಡರಿನ ಟೆಂಡರು ಭಾಗ-2ನ್ನು ತೆರೆಯುವ ಮತ್ತು ಪರಿಗಣಿಸುವ ಮೊದಲು ಟೆಂಡರುದಾರ ಅರ್ಹತೆ, ಸೂಕ್ತತೆ, ಅನುಭವ, ಗಿರಾಕಿಗಳ ಮುಂತಾದ ವಿಷಯಗಳ ಮೌಲ್ಯಮಾಪನ ಮಾಡಿ ಪರಿಗಣಿಸಿ ಇತ್ಯರ್ಥಪಡಿಸಲಾಗುವುದು.

9.3 ತಾಂತ್ರಿಕ ಟೆಂಡರು ಭಾಗ-1ರಲ್ಲಿ ನಿಗದಿಪಡಿಸಿದ ಷರತ್ತು ಮತ್ತು ನಿಬಂಧನೆಗಳ ರೀತ್ಯಾ ಅರ್ಹತೆಯನ್ನ ಗಳಿಸಿದ ಮತ್ತು ಆಯ್ಕೆಗೊಂಡ ಟೆಂಡರುದಾರರು ದರ ನಮೂದಿಸಿ ಸಲ್ಲಿಸಿದ ವಾಣಿಜ್ಯ ಟೆಂಡರು ಭಾಗ-2 ನ್ನು ಮಾತ್ರ ಪರಿಗಣಿಸಲಾಗುವುದು.

**10. ಟೆಂಡರುಗಳ ಪರಿಶೀಲನೆ :**

**10.1** ತಾಂತ್ರಿಕ ಟೆಂಡರು ಭಾಗ-1ರಲ್ಲಿ ನಿಗದಿಪಡಿಸಿದ ಯಾವುದೇ ಒಂದು ಅಥವಾ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಪೂರೈಸದ ಟೆಂಡರುದಾರರು ಸಲ್ಲಿಸಿದ ವಾಣಿಜ್ಯ ಟೆಂಡರು ಭಾಗ-2ನ್ನು ತೆರೆಯಲಾಗುವುದಿಲ್ಲ ಹಾಗೂ ಪರಿಗಣಿಸಲಾಗುವುದಿಲ್ಲ.

**10.2** ತಾಂತ್ರಿಕ ಟೆಂಡರು ಭಾಗ-1ರಲ್ಲಿ ನಮೂದಿಸಿದ ಎಲ್ಲಾ ಮಾಹಿತಿ/ಹೇಳಿಕೆಯನ್ನು ಪರಿಶೀಲಿಸುವ ಹಾಗೂ ಅಗತ್ಯವಿದ್ದಲ್ಲಿ ಹೆಚ್ಚುವರಿ ಮಾಹಿತಿಯನ್ನು ಕೇಳುವ ಅಧಿಕಾರವನ್ನು ಶಿವಮೊಗ್ಗ, ದಾವಣಗೆರೆ & ಚಿತ್ರದುರ್ಗ ಹಾಲು ಒಕ್ಕೂಟವು ಕಾಯ್ದಿರಿಸಿಕೊಂಡಿದೆ.

**11. ಟೆಂಡರುಗಳ ಮೌಲ್ಯಮಾಪನ :**

11.1 ಟೆಂಡರುಗಳನ್ನು ತಾಂತ್ರಿಕ ಕ್ಷಮತೆ ಮತ್ತು ಗುತ್ತಿಗೆ ಸೇವೆಗೆ ಸಂಬಂಧಿಸಿದ ಸಲ್ಲಿಸಿದ ವಿವರಗಳನ್ನು ಪರಿಗಣಿಸಿ ಮೌಲ್ಯಮಾಪನ ಮಾಡಲಾಗುವುದು. ಕಾಯ್ದೆಯನ್ವಯ ಕನಿಷ್ಟ ವೇತನ, ತುಟ್ಟಿಭತ್ಯೆ, ಭವಿಷ್ಯ ನಿಧಿ, ನೌಕರರ ರಾಜ್ಯ ವಿಮೆ ಮತ್ತು ಸೇವಾ ವೆಚ್ಚ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಶಾಸನಬದ್ಧ ಹೊಣೆಗಾರಿಕೆಗಳಿಗಿಂತ ವಾಣಿಜ್ಯ ಟೆಂಡರಿನಲ್ಲಿ ನಮೂದಿಸಿರುವ ದರವು ಕಡಿಮೆಯಾದಲ್ಲಿ ಅದನ್ನು ತಿರಸ್ಕರಿಸಲಾಗುವುದು.

ಮೇಲಿನ ಷರತ್ತು / ನಿಬಂಧನೆಗಳನ್ನು ನಾನು ಒಪ್ಪಿರುತ್ತೇನೆ / ನಾವು ಒಪ್ಪಿರುತ್ತೇವೆ.

ಟೆಂಡರುದಾರರ ಸಹಿ ಮತ್ತು ಮೊಹರು

**12. ಗುತ್ತಿಗೆ ನೀಡಲು ಮಾನದಂಡ :**

12.1 ಟೆಂಡರು ದಸ್ತಾವೇಜುಗಳಿಗೆ ಎಲ್ಲಾ ವಿಧದಲ್ಲಿ ವಾಸ್ತವಿಕವಾಗಿ ಪ್ರತಿಕ್ರಿಯಿಸುವ (Substantially responsive) ರೀತಿಯಲ್ಲಿರುವುದಾಗಿ ಪರಿಗಣಿಸಲಾದ ಟೆಂಡರು ಮತ್ತು ಕಡಿಮೆ ದರ ನಮೂದಿಸಿದ ಟೆಂಡರುದಾರರಿಗೆ ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ಗುತ್ತಿಗೆ ಆದೇಶವನ್ನು ನೀಡುವುದು. ಆದಾಗ್ಯೂ ಟೆಂಡರುದಾರರಿಗೆ ಗುತ್ತಿಗೆಯನ್ನು ಸಮರ್ಥವಾಗಿ ನಿರ್ವಹಿಸುವ ಅರ್ಹತೆ ನುರಿತ ಅನುಭವ ಉಳ್ಳ ಕೆಲಸಗಾರರು ಮತ್ತು ಸಂಪನ್ಮೂಲ ಇರಬೇಕು.

**13. ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಹಕ್ಕುಗಳು :**

13.1 ಯಾವುದೇ ಕಾರಣ ಗಳನ್ನು ನೀಡದೆ ಟೆಂಡರ್ ಅಂಗೀಕರಿಸುವ ಅಥವಾ ತಿರಸ್ಕರಿಸುವ ಮತ್ತು ಗುತ್ತಿಗೆ ನೀಡುವ ಮೊದಲು ಯಾವುದೇ ಸಮಯದಲ್ಲಿ ಟೆಂಡರು ಪ್ರಕ್ರಿಯೆಯನ್ನು ರದ್ದುಗೊಳಿಸುವ ಮತ್ತು ಕಡಿಮೆ ದರ ನಮೂದಿಸಿದ ಟೆಂಡರುದಾರರೊಂದಿಗೆ ಮಾತ್ರ ದರಗಳನ್ನು ನಿಷ್ಕರ್ಷೆ ಮಾಡುವ ಅಥವಾ ಒಪ್ಪಿಕೊಳ್ಳುವ/ತಿರಸ್ಕರಿಸುವ ಸಂಪೂರ್ಣ ಅಧಿಕಾರವನ್ನು ಟೆಂಡರು ಅಂಗೀಕರಿಸುವ ಪ್ರಾಧಿಕಾರ ಸಮಿತಿಯು ಕಾದಿರಿಸಿಕೊಂಡಿದೆ.

13.2 ಷರತ್ತು ಪೂರ್ವಕ ಟೆಂಡರುಗಳನ್ನು ಅಂಗೀಕರಿಸಲಾಗುವುದಿಲ್ಲ. ಟೆಂಡರುದಾರರು ಟೆಂಡರು ದಸ್ತಾವೇಜಿನೊಂದಿಗೆ ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಷರತ್ತುಗಳಿಗೆ ಪ್ರತಿಯಾಗಿ ಯಾವುದೇ ಷರತ್ತುಗಳನ್ನು ವಿಧಿಸಬಾರದು. ಒಂದು ವೇಳೆ ವಿಧಿಸಿದಲ್ಲಿ ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು ಅದಕ್ಕೆ ಬದ್ಧವಲ್ಲ.

13.3 ಗುತ್ತಿಗೆಯನ್ನು ನೀಡುವಾಗ ದರದಲ್ಲಿ ಅಥವಾ ಇತರೆ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಮಾಡದೆ ಕೆಲಸದ ಪರಿಮಾಣವನ್ನು ಹೆಚ್ಚಿಸುವ ಅಥವಾ ಕಡಿಮೆಗೊಳಿಸುವ ಅಧಿಕಾರವನ್ನು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು ಕಾದಿರಿಸಿಕೊಂಡಿದೆ.

14. **ತೀರ್ಪು ಪ್ರಕಟಣೆ :**

14.1 ಟೆಂಡರಿನ ಸಿಂಧುತ್ವ ಅವಧಿ ಮುಕ್ತಾಯಗೊಳ್ಳುವ ಮೊದಲು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು ಟೆಂಡರು ಅಂಗೀಕೃತಗೊಂಡ ಬಗ್ಗೆ ಯಶಸ್ವಿ ಟೆಂಡರುದಾರರಿಗೆ ಬರವಣಿಗೆಯಲ್ಲಿ ಖುದ್ದಾಗಿ ನೊಂದಾಯಿತ ಅಂಚೆ, ಫ್ಯಾಕ್ಸ್, ಇ–ಮೇಲ್ ಮೂಲಕ ತಿಳಿಸುತ್ತದೆ. ಟೆಂಡರು ಅಂಗೀಕೃತಗೊಂಡ ಅಥವಾ ತಿರಸ್ಕೃತಗೊಂಡ ಬಗ್ಗೆ ಯಾವುದೇ ವಿಚಾರಣೆಯನ್ನು ಪ್ರತಿಕ್ರಿಯಿಸಲಾಗುವುದಿಲ್ಲ.

**15. ಗುತ್ತಿಗೆ ವರ್ಗಾವಣೆ :**

15.1 ಯಾವುದೇ ಕಾರಣಕ್ಕಾಗಿಯಾಗಲೀ ಗುತ್ತಿಗೆ ಪ್ರಾರಂಭದ ಮೊದಲು ಅಥವಾ ಗುತ್ತಿಗೆ ಪ್ರಾರಂಭವಾದ ನಂತರ ಗುತ್ತಿಗೆಯು ವರ್ಗಾವಣೆಯಾಗತಕ್ಕದಲ್ಲ. ಗುತ್ತಿಗೆಯ ಹಕ್ಕನ್ನು ಯಾವುದೇ ರೀತಿಯಲ್ಲಿ ಬೇರೆಯವರಿಗೆ ವಹಿಸಲು ಗುತ್ತಿಗೆಯಲ್ಲಿ ನಿಗದಿಪಡಿಸಿರುವ ಜವಾಬ್ದಾರಿಯನ್ನು ತ್ಯಜಿಸಲು ಅವಕಾಶವಿಲ್ಲ.

15.2 ಗುತ್ತಿಗೆ ವರ್ಗಾವಣೆಯ ಯಾವುದೇ ಮನವಿಯನ್ನು ಷರತ್ತುಗಳನ್ನು ಪಾಲಿಸಿಲ್ಲವೆಂದು ಪರಿಗಣಿಸಲಾಗುವುದು ಮತ್ತು ಅರ್ನೆಸ್ಟ್ ಹಣ ಠೇವಣಿ ಅಥವಾ ಭದ್ರತಾ ಠೇವಣಿಯನ್ನು ಮುಟ್ಟು ಗೋಲು ಹಾಕಿಕೊಳ್ಳಲಾಗುವುದು.

**16. ಭದ್ರತಾ ಠೇವಣಿ :**

16.1 ಒಪ್ಪಿಗೆ ಪತ್ರ ತಲುಪಿದ 15 ದಿನಗಳೊಳಗೆ ಯಶಸ್ವಿ ಟೆಂಡರುದಾರರು ಗುತ್ತಿಗೆಯನ್ನು ನಿರ್ವಹಿಸುವುದಕ್ಕೆ ಖಾತರಿಯಾಗಿ ಟೆಂಡರಿನಲ್ಲಿ ಇತ್ಯರ್ಥಗೊಂಡ ಒಂದು ತಿಂಗಳ ಟೆಂಡರ್ ಮೊತ್ತವನ್ನು (ಗುತ್ತಿಗೆ ಹಣ) ಭದ್ರತಾ ಠೇವಣಿಯಾಗಿ ಸಲ್ಲಿಸಬೇಕು.

ಮೇಲಿನ ಷರತ್ತು / ನಿಬಂಧನೆಗಳನ್ನು ನಾನು ಒಪ್ಪಿರುತ್ತೇನೆ / ನಾವು ಒಪ್ಪಿರುತ್ತೇವೆ.

ಟೆಂಡರುದಾರರ ಸಹಿ ಮತ್ತು ಮೋಹರು

16.2 ಭದ್ರತಾ ಠೇವಣಿಯು ಈ ಕೆಳಗೆ ನಮೂದಿಸಿದಂತೆ ಇರಬೇಕು.

ರಾಷ್ಟ್ರೀಕೃತ : ಶೆಡ್ಯೂಲ್ಡ್ ಬ್ಯಾಂಕಿನಿಂದ "Managing Director, Shivamogga, Davangere & Chitradurga Dist. Milk Union Ltd.," ಇವರ ಹೆಸರಿನಲ್ಲಿ ಶಿವಮೊಗ್ಗದಲ್ಲಿ ಪಾವತಿಯಾಗುವಂತೆ ಪಡೆದ ಡಿಮ್ಯಾಂಡ್ ಡ್ರಾಫ್ಟ್ ರೂಪದಲ್ಲಿ ಇರಬೇಕು. ಅಥವಾ ಭದ್ರತಾ ಠೇವಣಿಯನ್ನು **ಬ್ಯಾ0ಕ್ ಗ್ಯಾರ0ಟಿ / ಬ್ಯಾಂಕ್ ನಿಶ್ಚಿತ ಠೇವಣಿ ರೂಪದಲ್ಲಿ ಒಕ್ಕೂಟದಲ್ಲಿ ಇಡತಕ್ಕದ್ದು,** ಯಶಸ್ವಿ ಟೆಂಡರುದಾರರು ಟೆಂಡರು ಷರತುಗಳ ಉಪಬಂಧಗಳನ್ನು ಪಾಲಿಸಲು ವಿಫಲರಾದಲ್ಲಿ ನೀಡಿರುವ ಗುತ್ತಿಗೆಯನ್ನು ರದ್ದುಪಡಿಸಲು ಮತ್ತು ಅರ್ನೆಸ್ಟ್ ಹಣ ಠೇವಣಿ/ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

**17 ಒಪ್ಪಂದ ಸಹಿ ಮಾಡುವುದು:**

17.1 ಟೆಂಡರು ಅಂಗೀಕೃತಗೊಂಡ ಬಗ್ಗೆ ಯಶಸ್ವಿ ಟೆಂಡರುದಾರರಿಗೆ ಶಿವಮೊಗ್ಗ, ದಾವಣಗೆರೆ & ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟವು ಒಪ್ಪಿಗೆ ಪತ್ರವನ್ನು ನೀಡಿದ ಕೂಡಲೇ ನಿಗದಿತ ಒಪ್ಪಂದದ ಪ್ರತಿಯನ್ನು ಶಿವಮೊಗ್ಗ ದಾವಣಗೆರೆ & ಚಿತ್ರದುರ್ಗ ಹಾಲು ಒಕ್ಕೂಟದಿಂದ ಪಡೆದು ಅದರ ರೀತ್ಯಾ 15 ದಿನಗಳೊಳಗೆ 200.00 ರೂ,ಗಳ ಛಾಪಾ ಕಾಗದದಲ್ಲಿ (Non judicial) ಒಪ್ಪಂದವನ್ನು ಮಾಡಿಕೊಳ್ಳಬೇಕು.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ**
**ಸಹಕಾರ ಹಾಲು ಒಕ್ಕೂಟ ನಿ.,**

ಮೇಲಿನ ಷರತ್ತು / ನಿಬಂಧನೆಗಳನ್ನು ನಾನು ಒಪ್ಪಿರುತ್ತೇನೆ / ನಾವು ಒಪ್ಪಿರುತ್ತೇವೆ.

ಟೆಂಡರುದಾರರ ಸಹಿ ಮತ್ತು ಮೋಹರು

# ಅನುಬಂಧ – ಡಿ

## ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದಲ್ಲಿ ದ್ವೈವಾರ್ಷಿಕ ಗುತ್ತಿಗೆ ಆಧಾರದ ಮೇಲೆ ಹಾಲು, ಮೊಸರು, ಮಜ್ಜಿಗೆ ಮತ್ತು ತುಪ್ಪವನ್ನು ತುಂಬಿಸುವ ಯಂತ್ರಗಳ ದುರಸ್ಥಿ ಮತ್ತು ನಿರ್ವಹಣೆಯ ಗುತ್ತಿಗೆಯ ಬಗ್ಗೆ ಷರತ್ತು ಮತ್ತು ನಿಬಂಧನೆಗಳು

**1.0 ಗುತ್ತಿಗೆಯ ಸಿಂಧುತ್ವ :**

1.1 ಗುತ್ತಿಗೆ ಅವಧಿಯು ಪ್ರಾರಂಭವಾದ ದಿನಾಂಕದಿಂದ **ಎರಡು ವರ್ಷದ ಅವಧಿಗೆ** ಇರುತ್ತದೆ.

1.2 ಕರಾರನ್ನು ಸಹಿ ಮಾಡಿದ ಮತ್ತು ನಿಗಧಿಪಡಿಸಿದ ಭದ್ರತಾ ಠೇವಣಿಯನ್ನು ಸಲ್ಲಿಸಿದ ನಂತರ ಶಿವಮೊಗ್ಗ, ದಾವಣಗೆರೆ & ಚಿತ್ರ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟವು ಸೂಚಿಸುವ ದಿನಾಂಕದಿಂದ ಗುತ್ತಿಗೆಯು ಪ್ರಾರಂಭವಾಗುವುದು.

**1.3** ಗುತ್ತಿಗೆ ಅವಧಿ ಮುಕ್ತಾಯಗೊಂಡ ನಂತರ ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ವಿವೇಚನೆಯ ಮೇರೆಗೆ ಪ್ರಸ್ತುತ ಗುತ್ತಿಗೆಯನ್ನು ಮೇಲಿನ ಕರಾರಿನ ಅನ್ವ0ಯ ಷರತ್ತುಗಳಿಗೆ ಒಳಪಟ್ಟು ಚಾಲ್ತಿಯಲ್ಲಿರುವ ದರದಲ್ಲಿಯೇ ಗುತ್ತಿಗೆ ಅವಧಿಯನ್ನು ಮೂರು ತಿಂಗಳು ಅಥವಾ ಈ ವೇಳೆ0ಯಲ್ಲಿ ಬದಲಿ ವ್ಯವಸ್ಥೆ0ಯಾಗುವ ವರೆಗೂ 0ಯಾವುದು ಮೊದಲೊ ಈ ಅವಧಿಗೆ ವಿಸ್ತರಿಸುವ ಅಧಿಕಾರವನ್ನು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು ಹೊಂದಿರುತ್ತದೆ.

**2.0 ಗುತ್ತಿಗೆ ದರ :**

2.1 ಗುತ್ತಿಗೆ ದರ ನಮೂದಿಸುವಾಗ High speed PLC based fully automataed FFS ಯಂತ್ರಗಳ ಚಾಲನೆ ಮತ್ತು ನಿರ್ವಹಣೆ ಮಾಡಬೇಕಾಗಿರುವುದನ್ನು ಪರಿಗಣಿಸಿ ಗುತ್ತಿಗೆ ದರ ನಮೂದಿಸತಕ್ಕದ್ದು.

2.2 ವಿಸ್ತರಿಸಿದ ಅವಧಿ ಒಳಗೊಂಡ ಗುತ್ತಿಗೆ ಅವಧಿಯಲ್ಲಿ ಗುತ್ತಿಗೆ ದರವು ಯಾವುದೇ ಹೆಚ್ಚಳ/ಇಳಿಕೆ ಇಲ್ಲದೆ ಸ್ಥಿರವಾಗಿ ಇರುತ್ತದೆ.

**2.3** ಒಪ್ಪಂದದ ಪ್ರಕಾರ ಪೂರ್ಣವಾಗಿ ಮತ್ತು ತೃಪ್ತಿಕರವಾಗಿ ನಿರ್ವಹಿಸಿದ ಕೆಲಸಕ್ಕೆ ಗುತ್ತಿಗೆ ಮೊತ್ತವನ್ನು ಶಿವಮೊಗ್ಗ, ದಾವಣಗೆರೆ & ಚಿತ್ರ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟದಿಂದ ಗುತ್ತಿಗೆಯನ್ನು ಪಡೆದ ಗುತ್ತಿಗೆದಾರರಿಗೆ ಪಾವತಿಸಲಾಗುವುದು.

**3.0 ಹಣ ಪಾವತಿ :**

3.1 ಗುತ್ತಿಗೆದಾರರು ಪ್ರತಿ ತಿಂಗಳು ನಿರ್ವಹಿಸಿದ ಕೆಲಸದ ಮತ್ತು ನಿಯೋಜಿಸಿದ ನೌಕರರ ವಿವರವನ್ನು ಒಳಗೊಂಡ ಬಿಲ್ಲನ್ನು ನಿಗಧಿಪಡಿಸಿದ ನಮೂನೆಯಲ್ಲಿ ಹಾಗೂ ದ್ವಿಪ್ರತಿಯಲ್ಲಿ ಡೇರಿಗೆ ಸಲ್ಲಿಸಬೇಕು. ಅವಶ್ಯಕತೆಗನುಗುಣವಾಗಿ ನಿಗಧಿಪಡಿಸಿದ ಕೆಲಸವನ್ನು ತೃಪ್ತಿಕರವಾಗಿ ನಿರ್ವಹಿಸಿದ ಬಗ್ಗೆ ಸಂಬಂಧಿಸಿದ ಅಧಿಕಾರಿಗಳ ಪರಿಶೀಲನೆ ಮತ್ತು ದೃಢೀಕರಣದ ಆಧಾರದಲ್ಲಿ ನಿರ್ವಹಿಸಿದ ಕೆಲಸಕ್ಕನುಗುಣವಾಗಿ ಆದಾಯ ತೆರಿಗೆಯ ಕಟಾವಣೆ ಒಳಗೊಂಡಂತೆ ಎಲ್ಲಾ ಶಾಸನಬದ್ಧ ಕಟಾವಣೆ ಮತ್ತು ಶಿವಮೊಗ್ಗ, ದಾವಣಗೆರೆ & ಚಿತ್ರ್ರದುರ್ಗ ಹಾಲು ಒಕ್ಕೂಟಕ್ಕೆ ಬರಬೇಕಾದ ಮೊತ್ತ ಹಾಗೂ ವಿಧಿಸಬಹುದಾದ ದಂಡಗಳ ಕಟಾವಣೆ ಮಾಡಿ ಉಳಿಕೆ ಮೊತ್ತವನ್ನು ಚೆಕ್ ಮುಖೇನ ಗುತ್ತಿಗೆದಾರರಿಗೆ ಪಾವತಿಸಲಾಗುವುದು.

3.2 ಗುತ್ತಿಗೆದಾರರು ಪ್ರತಿ ತಿಂಗಳು ತಾವು ಒಕ್ಕೂಟದಿಂದ ಪಡೆದ ಬಿಲ್ ಮೇಲೆ ಸರಕು ಮತ್ತು ಸೇವಾ ತೆರಿಗೆ ಅನ್ನು ನಿಗದಿತ ಸಮಯದೊಳಗೆ ಸಂಬಂಧಿಸಿದ ಇಲಾಖೆಗೆ ಪಾವತಿಸತಕ್ಕದ್ದು.

3.3 ಗುತ್ತಿಗೆದಾರರು ಮಾಸಿಕ ಬಿಲ್ ಅವಧಿ ಮುಗಿದ ಕೂಡಲೇ ನಿಯಮಾವಳಿ ಪ್ರಕಾರ ಎಲ್ಲಾ ಗುತ್ತಿಗೆ ಕಾರ್ಮಿಕರಿಗೆ ಸಂಬಂಧಿಸಿದಂತೆ ಅಂದರೆ ಕಾರ್ಯ ನಿರ್ವಹಿಸಿದ ಗುತ್ತಿಗೆ ಕಾರ್ಮಿಕರಿಗೆ ಇ.ಎಸ್.ಐ. ಮತ್ತು ಪಿ.ಎಫ್. ಮುಂತಾದ ಶಾಸನಬದ್ಧ ವಂತಿಗೆಗಳನ್ನು ಆಯಾ ಇಲಾಖೆಗಳಿಗೆ ಗುತ್ತಿಗೆಯ ಮಾಸಿಕ ಬಿಲ್‌ನ ಮೊತ್ತದ ಮೇಲೆ ಸಂಬಂಧಪಟ್ಟ ಇಲಾಖೆಗಳು ನಿಗದಿಪಡಿಸಿರುವ ಶೇಕಡವಾರು ಕನಿಷ್ಟ ಮೊತ್ತವನ್ನು ನಿಗದಿತ ಅವಧಿಯೊಳಗೆ ಪಾವತಿಸುವುದು. ತಪ್ಪಿದಲ್ಲಿ ಮುಂದಿನ ತಿಂಗಳ ಗುತ್ತಿಗೆದಾರರ ಬಿಲ್‌ನಲ್ಲಿ ಯಾವುದೇ ಮುನ್ಸೂಚನೆ ನೀಡದೆ ಮೇಲ್ಕಾಣಿಸಿದ ರೀತ್ಯ ಪಾವತಿಸಬೇಕಾದ ಕನಿಷ್ಟ ಒಟ್ಟು ಹಣವನ್ನು ಕಠಾವಣೆ ಮಾಡಿಕೊಂಡು ಪಿ.ಎಫ್. ಇ.ಎಸ್.ಐ. ಸಂಸ್ಥೆಗಳಿಗೆ ಒಕ್ಕೂಟದಿಂದಲೇ ಗುತ್ತಿಗೆದಾರರ ಸಂಬಂಧಿಸಿದ ಖಾತೆಗೆ ಜಮಾ ಮಾಡಲಾಗುವುದು. ಅಂತಹ ಸಂದರ್ಭದಲ್ಲಿ ದಂಡ ಹಾಗೂ ನಿರ್ವಹಣಾ ವೆಚ್ಚವನ್ನು ಗುತ್ತಿಗೆದಾರರ ಬಿಲ್‌ನಲ್ಲಿ / ಭದ್ರತಾ ಠೇವಣಿಯಲ್ಲಿ ಕಠಾವಣೆ ಮಾಡಿಕೊಳ್ಳುವ ಅಧಿಕಾರವನ್ನು ಒಕ್ಕೂಟ ಹೊಂದಿರುತ್ತದೆ.

3.4 ಗುತ್ತಿಗೆದಾರರು ಆಯಾ ತಿಂಗಳುಗಳಲ್ಲಿ ಎಲ್ಲಾ ಗುತ್ತಿಗೆ ಕಾರ್ಮಿಕರಿಗೆ ಸಂಬಂಧಿಸಿದಂತೆ ಇ.ಎಸ್.ಐ. ಮತ್ತು ಪಿ.ಎಫ್. ವಂತಿಕೆಯನ್ನು ಕಡ್ಡಾಯವಾಗಿ ಪಾವತಿಸತಕ್ಕದ್ದು ತಪ್ಪಿದ್ದಲ್ಲಿ ಒಕ್ಕೂಟವು / ಇಲಾಖೆಯು ತೆಗೆದುಕೊಳ್ಳುವ ಯಾವುದೇ ಕ್ರಮಕ್ಕೆ ಗುತ್ತಿಗೆದಾರರು ಬದ್ದರಾಗಿರುತ್ತಾರೆ.

ಮೇಲಿನ ಷರತ್ತು / ನಿಬಂಧನೆಗಳನ್ನು ನಾನು ಒಪ್ಪಿರುತ್ತೇನೆ / ನಾವು ಒಪ್ಪಿರುತ್ತೇವೆ.

ಟೆಂಡರುದಾರರ ಸಹಿ ಮತ್ತು ಮೋಹರು

3.5 ಗುತ್ತಿಗೆದಾರರು ಅಂತಿಮ ತಿಂಗಳ ಕಾರ್ಮಿಕರ ವೇತನವನ್ನು ವೇತನದ ಅವಧಿ ಮುಗಿದ 10 ದಿನಗಳ ಒಳಗಾಗಿ ಕಾರ್ಮಿಕರಿಗೆ ಹಾಗೂ ಶಾಸನಬದ್ಧ ಪಾವತಿಗಳನ್ನು ಸಂಬಂಧಿಸಿದ ಇಲಾಖೆಗೆ ಪಾವತಿಸಿ, ಸದರಿ ದಾಖಲೆಗಳನ್ನು ಒಕ್ಕೂಟಕ್ಕೆ 15 ದಿನಗಳೊಳಗಾಗಿ ಒದಗಿಸುವುದು. ನಂತರವೇ ಅಂತಿಮ ತಿಂಗಳ ಬಿಲ್ ಪಾವತಿಸಲು ಪರಿಗಣಿಸಲಾಗುವುದು.

3.6 ಗುತ್ತಿಗೆದಾರರು ಡಿಮಾಂಡ್ ಡ್ರಾಫ್ಟ್ ರೂಪದಲ್ಲಿ ಹಣ ಪಡೆಯಲು ಇಚ್ಛಿಸಿದಲ್ಲಿ ತಾವೇ ಸ್ವತಃ ಡಿ.ಡಿ. ವೆಚ್ಚವನ್ನು ಭರಿಸಬೇಕಾಗುತ್ತದೆ.

4.0 ಗುತ್ತಿಗೆದಾರರು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದಲ್ಲಿ ಗುತ್ತಿಗೆಯನ್ನು ನಿರ್ವಹಿಸುವ ಅವಧಿಯಲ್ಲಿ ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದಿಂದ ಪಡೆಯುವ ಅಥವಾ ಲಭ್ಯವಾಗುವ ಹಾಲು ಮತ್ತು ಹಾಲಿನ ಉತ್ಪನ್ನಗಳ ಉತ್ಪಾದನೆ, ಮಾರಾಟ/ಮಾರುಕಟ್ಟೆ, ಡೇರಿಯ ವ್ಯವಹಾರ ನಿರ್ವಹಣೆಗೆ ಸಂಬಂಧಿಸಿದ ಲಿಖಿತ ಮತ್ತು ಮೌಖಿಕ ಮಾಹಿತಿಯನ್ನು ಯಾರಿಗೂ ಬಯಲು ಮಾಡಬಾರದು ಮತ್ತು ಅಂತಹ ಮಾಹಿತಿಯ ರಹಸ್ಯವನ್ನು ಕಾಪಾಡಬೇಕು.

5.0 ಗುತ್ತಿಗೆ ಅವಧಿಯಲ್ಲಿ ಸರ್ಕಾರವು ಕನಿಷ್ಟ ವೇತನ ಕಾಯಿದೆ, ಅನ್ವಯ ಹಾಲು, ಮೊಸರು ಮತ್ತು ತುಪ್ಪವನ್ನು ಶೇಖರಣೆ, ಸಂಸ್ಕರಣೆ ಮತ್ತು ವಿತರಣೆ ಗುತ್ತಿಗೆ ಕೆಲಸದಲ್ಲಿ ತೊಡಗಿಸುವ ದರಗಳನ್ನು ನಿಗಧಿಪಡಿಸಿರುವ ಹಾಗೂ ಕಾಲ ಕಾಲಕ್ಕೆ ಪರಿಷ್ಕರಿಸುವ ಕನಿಷ್ಟ ವೇತನ ಮಜೂರಿ ದರಗಳನ್ನು ಮತ್ತು ತುಟ್ಟಿಭತ್ಯೆಯನ್ನು ಕಾರ್ಮಿಕರಿಗೆ ಪಾವತಿಸಲು ಗುತ್ತಿಗೆದಾರರು ಬದ್ಧರಿರಬೇಕು.

5.1 ಕಾರ್ಮಿಕರಿಗೆ ಕಾಯ್ದೆ ಅಡಿ ವಾರಕ್ಕೆ ಒಂದು ದಿನ ಪೇಡ್ ವೀಕ್ಲಿ ಆಫ್ ನೀಡಬೇಕಾಗಿರುತ್ತದೆ. ಯಶಸ್ವಿ ಟೆಂಡರ್‌ದಾರರು ಪ್ರಸ್ತುತ ಟೆಂಡರನಲ್ಲಿ ನಮೂದಿಸಿದ ದರವು ಸರ್ಕಾರವು ಕಾಲಕಾಲಕ್ಕೆ ಪರಿಷ್ಕ್ಯರಿಸುವ ಕನಿಷ್ಟ ವೇತನ + ವಿ.ಡಿ.ಎ. ಮೊತ್ತಕ್ಕಿಂತ ಕಡಿಮೆಯಾದಲ್ಲಿ ವ್ಯತ್ಯಾಸದ ಶಾಸನಬದ್ದ ಮೊತ್ತವನ್ನು ಮಾತ್ರ ಗುತ್ತಿಗೆದಾರರಿಗೆ ಪಾವತಿಗೆ ಪರಿಗಣಿಸಲಾಗುವುದು.

5.2 ಗುತ್ತಿಗೆ ಕೆಲಸಗಾರರಿಂದ ಪ್ರತಿ ದಿನ 8 ಘಂಟೆಗಳಿಗೂ ಹೆಚ್ಚು ಅವಧಿಯ ಕೆಲಸವನ್ನು ಮಾಡಿಸಬಾರದು. ಮಹಿಳಾ ಕೆಸಲಗಾರರನ್ನು ರಾತ್ರಿ ಪಾಳಿಯಲ್ಲಿ ಕೆಲಸಕ್ಕೆ ನಿಯೋಜಿಸಬಾರದು. ಕಡ್ಡಾಯವಾಗಿ ವೇತನದೊಂದಿಗೆ ವಾರದ ರಜೆ ನೀಡಬೇಕು. ಇಲ್ಲದಿದ್ದಲ್ಲಿ ಕಾನೂನಿನನ್ವಯ ರಜಾ ವೇತನ ಮತ್ತು ಹೆಚ್ಚುವರಿ ಕೆಲಸಕ್ಕೆ ಹೆಚ್ಚುವರಿ ವೇತನ ನೀಡಬೇಕು. ಗುತ್ತಿಗೆದಾರರು ಒದಗಿಸುವ ಕೆಲಸಗಾರರಿಗೆ ಭವಿಷ್ಯನಿಧಿ, ನೌಕರರ ರಾಜ್ಯ ವಿಮಾ ವಂತಿಗೆ ಮತ್ತು ಆಡಳಿತಾತ್ಮಕ ವೆಚ್ಚ ಒಳಗೊಂಡ ಎಲ್ಲಾ ಖರ್ಚುಗಳನ್ನು ಭರಿಸಿ ಶಾಸನಾತ್ಮಕ ಸೌಲಭ್ಯಗಳನ್ನು ನೀಡಬೇಕು. ಗುತ್ತಿಗೆದಾರರು ತಾವು ನಿಯೋಜಿಸುವ ಕೆಲಸಗಾರರಿಗೆ ಉಊ, ಇಐ ಬೋನಸ್ ಪಾವತಿ ಬಗ್ಗೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ಜವಾಬ್ದಾರರಾಗಿರುತ್ತಾರೆ. ಗುತ್ತಿಗೆ ಕೆಲಸಗಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಸಂದರ್ಭದಲ್ಲಿ ಸಹಜ ನ್ಯಾಯದ ನಿಯಮಗಳನ್ನು ಗುತ್ತಿಗೆದಾರರು ಅನುಸರಿಸಬೇಕು. ಪ್ರತಿ ತಿಂಗಳ 10ನೇ ತಾರೀಖಿನ ಮೊದಲು ಗುತ್ತಿಗೆದಾರರು ವೇತನವನ್ನು ಪಾವತಿಸಬೇಕು.

6.0 ಶಿವಮೊಗ್ಗ, ದಾವಣಗೆರೆ & ಚಿತ್ರದುರ್ಗ ಹಾಲು ಒಕ್ಕೂಟದ ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ ಸಂಭವಿಸಬಹುದಾದ ಯಾವುದೇ ಅಪಘಾತಗಳಿಂದ ಗುತ್ತಿಗೆದಾರರು ನಿಯೋಜಿಸುವ ಕೆಲಸಗಾರರಿಗೆ ಊನ ಅಥವಾ ಅಂಗಹೀನತೆ ಉಂಟಾದಲ್ಲಿ ಅಥವಾ ಸಾವು–ನೋವು ಸಂಭವಿಸಿದಲ್ಲಿ ಗುತ್ತಿಗೆದಾರರೇ ಜವಾಬ್ದಾರರಾಗಿರುತ್ತಾರೆ ಹಾಗೂ ಸಂಬಂಧಿಸಿದ ಕಾನೂನು/ನಿಯಮಗಳಲ್ಲಿ ಸೂಚಿಸಿದಂತೆ ಈ ಬಗ್ಗೆ ತಗಲುವ ವೆಚ್ಚ/ಸೌಲಭ್ಯಗಳನ್ನು ಮತ್ತು ಪರಿಹಾರವನ್ನು ಪಾವತಿಸಲು ಗುತ್ತಿಗೆದಾರರೇ ಹೊಣೆಯಾಗಿರುತ್ತಾರೆ.

6.0 ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದಲ್ಲಿ ಕೆಲಸ ನಿರ್ವಹಿಸುವ ಗುತ್ತಿಗೆ ಕೆಲಸಗಾರರಿಗೆ ಮಾತ್ರ ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಉಪಹಾರ ಗೃಹದಿಂದ ಡೇರಿಯು ನಿಗಧಿಪಡಿಸುವ ದರದಲ್ಲಿ ಊಟ, ಕಾಫಿ, ತಿಂಡಿ ಒದಗಿಸಲಾಗುವುದು.

7.0 ಗುತ್ತಿಗೆದಾರರು ಒದಗಿಸುವ ಕೆಲಸಗಾರರು ಇತರೇ ಯಾವುದೇ ತರದ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿರಬಾರದು. ಡೇರಿ ಆವರಣದ ಒಳಗೆ ಮತ್ತು ಹೊರಗೆ ಗುತ್ತಿಗೆ ಕೆಲಸಗಾರರ ಕೃತ್ಯಗಳಿಗೆ ಗುತ್ತಿಗೆದಾರರೇ ಹೊಣೆಗಾರರು. ಅದರಿಂದ ಡೇರಿಗೆ ನಷ್ಟವಾದಲ್ಲಿ ಗುತ್ತಿಗೆದಾರರೇ ಭರಿಸಬೇಕಾಗುತ್ತದೆ. ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇರೀತಿಯಲ್ಲಿ ಡೇರಿಯ ಹಿತಾಸಕ್ತಿಗೆ ಧಕ್ಕೆಯಾಗದಂತೆ ಗುತ್ತಿಗೆದಾರರು ಕಾರ್ಯನಿರ್ವಹಿಸಬೇಕು.

ಮೇಲಿನ ಷರತ್ತು/ನಿಬಂಧನೆಗಳನ್ನು ನಾನು ಒಪ್ಪಿರುತ್ತೇನೆ/ನಾವು ಒಪ್ಪಿರುತ್ತೇವೆ.

ಟೆಂಡರುದಾರರ ಸಹಿ ಮತ್ತು ಮೋಹರು

9.0 ಗುತ್ತಿಗೆದಾರರು ಡೇರಿಯ ಆಸ್ತಿಯನ್ನು ಜಾಗರೂಕತೆಯಿಂದ ರಕ್ಷಿಸಿ ಕಾಪಾಡಬೇಕು ಮತ್ತು ಯಾವುದೇ ಹಾನಿಕಾರಕ ಘಟನೆ ಸಂಭವಿಸದಂತೆ ಜಾಗ್ರತೆ ವಹಿಸಬೇಕು. ಗುತ್ತಿಗೆದಾರರು ಒದಗಿಸುವ ಕೆಲಸಗಾರರ ನಿರ್ಲಕ್ಷ್ಯ ಹಾಗೂ ಬೇಜವಾಬ್ದಾರಿಯಿಂದ ಅಥವಾ ಉದ್ದೇಶಪೂರ್ವಕವಾಗಿ ಡೇರಿಗೆ ನಷ್ಟ ಉಂಟಾದಲ್ಲಿ, ಕಳವು ಆದಲ್ಲಿ, ವಸ್ತುಗಳು ನಾಶವಾದಲ್ಲಿ ಅವುಗಳ ಪೂರ್ಣ ಮೊತ್ತವನ್ನು ಡೇರಿಗೆ ಭರಿಸಲು ಗುತ್ತಿಗೆದಾರರೇ ಬದ್ಧರಿರಬೇಕು ಹಾಗೂ ಹೀಗೆ ಆಗುವ ನಷ್ಟವನ್ನು ದಂಡದೊಂದಿಗೆ ಮಾಹೆಯಾನ ಬಿಲ್ / ಭದ್ರತಾ ಠೇವಣಿಯಲ್ಲಿ ಕಟಾಯಿಸಲಾಗುವುದು. ಗುತ್ತಿಗೆದಾರರು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟಕ್ಕೆ ಕಾಲಕಾಲಕ್ಕೆ ನೀಡುವ ಬೇಡಿಕೆ / ಸೂಚನೆಗೆ ಅನುಗುಣವಾಗಿ ಹಾಗೂ ಕ್ಲಿಷ್ಟ ಸಮಯದಲ್ಲೂ ಸಮರ್ಪಕವಾಗಿ ಮತ್ತು ವಿಳಂಬವಾಗದಂತೆ ಸಕಾಲದಲ್ಲಿ ಕಾರ್ಯನಿರ್ವಹಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಉಂಟಾಗಬಹುದಾದ ನಷ್ಟದ ಮೊತ್ತವನ್ನು ಸೂಕ್ತ ದಂಡದೊಂದಿಗೆ ಗುತ್ತಿಗೆದಾರರಿಂದ ವಸೂಲಿ ಮಾಡಲಾಗುವುದು. ಗುತ್ತಿಗೆ ಪಡೆಯುವ ಟೆಂಡರುದಾರರು ಡೇರಿಯ ಬೇಡಿಕೆಗೆ/ ಸೂಚನೆಗನುಗುಣವಾಗಿ ಐ.ಟಿ.ಐ / ಡಿಪ್ಲೋಮ (ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್ / ಎಲೆಕ್ಟ್ರಾನಿಕ್ಸ್ / ಮೆಕ್ಯಾನಿಕಲ್) ವಿದ್ಯಾರ್ಹತೆಯ ಜೊತೆಯಲ್ಲಿ ತರಬೇತಿ ಹೊಂದಿದ ಅನುಭವುಳ್ಳ ಅಪರೇಟರ್‌ಗಳನ್ನು ನಿಯೋಜಿಸತಕ್ಕದ್ದು ಹಾಗೂ ಉತ್ತಮ ಗುಣಮಟ್ಟದ ಬಿಡಿ ಭಾಗಗಳನ್ನು ಯಂತ್ರಗಳಿಗೆ ಬಳಸತಕ್ಕದ್ದು. ಕಡಿಮೆ ಗುಣಮಟ್ಟದ ಬಿಡಿ ಭಾಗಗಳನ್ನು ಉಪಯೋಗಿಸಿದಲ್ಲಿ ಅಥವಾ ಸಕಾಲದಲ್ಲಿ ಯಂತ್ರಗಳ ಚಾಲನೆ ಮತ್ತು ನಿರ್ವಹಣೆಯಾಗದೆ ಇದ್ದ ಸಂದರ್ಭದಲ್ಲಿ ಹಾಗೂ ಸಕಾಲದಲ್ಲಿ ಬೇಡಿಕೆ ಅನುಸಾರ ಹಾಲು ಮತ್ತು ಹಾಲಿನ ಉತ್ಪನ್ನಗಳು ಪೂರೈಕೆ ಮಾಡಲಾಗದೆ ಹೋದ ಸಂದರ್ಭದಲ್ಲಿ ನಷ್ಟದ ಮೊತ್ತವನ್ನು ದಂಡದೊಂದಿಗೆ ಕಟಾಯಿಸಲಾಗುವುದು.

10.0 ಗುತ್ತಿಗೆದಾರರು ತಮಗೆ ವಹಿಸಿದ ಕೆಲಸಕಾರ್ಯಗಳನ್ನು ನಿರ್ವಹಿಸಲು ಪಡೆಯುವ ಕೆಲಸಗಾರರು ಗುತ್ತಿಗೆದಾರರ ನೌಕರರಾಗಿದ್ದು, ಯಾವಾಗಲೂ ಗುತ್ತಿಗೆದಾರರ ನೇರ ಅನನ್ಯ ನಿಯಂತ್ರಣ ಮತ್ತು ಮೇಲ್ವಿಚಾರಣೆಗೆ ಒಳಪಟ್ಟಿರುತ್ತಾರೆ. ಗುತ್ತಿಗೆದಾರರು ಗುತ್ತಿಗೆಯಡಿ ತಮಗಿರುವ ಬಾಧ್ಯತೆಗಳನ್ನು ಪೂರೈಸಲು ಕೆಲಸಗಾರರ ರಜಾ ಅವಧಿಯ ಬದಲಿ ವ್ಯವಸ್ಥೆಗೆ ಒಳಗೊಂಡು ಯಾವಾಗಲೂ ಟೆಂಡರ್‌ನಲ್ಲಿ ನಮೂದಿಸಿದಷ್ಟು ಕನಿಷ್ಟ ಕೆಲಸಗಾರರನ್ನು ಕೆಲಸಕ್ಕೆ ನಿಯೋಜಿಸುವುದು ಮತ್ತು ಸದರಿ ಕೆಲಸಗಾರರು ಗುತ್ತಿಗೆದಾರರ ಬಾಧ್ಯತೆಗಳನ್ನು ಪೂರೈಸುವಂತೆ ಖಾತರಿಪಡಿಸುವುದು ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ.

11. ಯಾವುದೇ ಕಾರಣಕ್ಕೆ ಗುತ್ತಿಗೆ ಕೆಲಸಗಾರರು ಡೇರಿಯ ನೌಕರರಲ್ಲ. ಆದ್ದರಿಂದ ಗುತ್ತಿಗೆ ಕೆಲಸಗಾರರ ತಪ್ಪು, ಒಪ್ಪುಗಳಿಗೆ ಗುತ್ತಿಗೆದಾರರು/ಗುತ್ತಿಗೆ ಕೆಲಸಗಾರರು ಇವರುಗಳ ಮಧ್ಯೆ ಯಾವುದೇ ರೀತಿಯಲ್ಲಿ ಏನೇ ಆದರೂ ಒಕ್ಕೂಟದೊಂದಿಗೆ ಮಾಲೀಕ–ನೌಕರ ಸಂಬಂಧವಿರುವುದಿಲ್ಲ ಮತ್ತು ಗುತ್ತಿಗೆದಾರರು ಸ್ವತಂತ್ರ ಏಜೆನ್ಸಿಯಾಗಿ ತಮ್ಮ ವ್ಯವಹಾರವನ್ನು ನಿರ್ವಹಿಸಬೇಕಾಗಿದ್ದು ಈ ವಾಸ್ತವಂಶವನ್ನು ತಾವು ಕೆಲಸಕ್ಕೆ ನಿಯೋಜಿಸುವ ಎಲ್ಲರಿಗೂ ಸ್ಪಷ್ಟಪಡಿಸಬೇಕಾಗುತ್ತದೆ.

11.1 ಗುತ್ತಿಗೆ ಅವಧಿಯು ಗುತ್ತಿಗೆ ಮಂಜೂರಾದ ದಿನಾಂಕದಿಂದ ಗುತ್ತಿಗೆದಾರರ ಕೆಲಸಕಾರ್ಯಗಳು ತೃಪ್ತಿಕರ / ಸಮರ್ಪಕವಾಗಿಲ್ಲದಿದ್ದಲ್ಲಿ ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು ಮೂರು ದಿನಗಳ ಲಿಖಿತ ಕಾರಣ – ಕೇಳಿ – ನೋಟೀಸ್ ನೀಡಿ ಅದಕ್ಕೆ ಗುತ್ತಿಗೆದಾರರು ನೀಡುವ ವಿವರಣೆ : ಸಮಜಾಯಿಷಿ ಡೇರಿಗೆ ತೃಪ್ತಿಕರವಾಗಿ ಕಂಡುಬಾರದಿದ್ದಲ್ಲಿ ಗುತ್ತಿಗೆಯನ್ನು ರದ್ದುಪಡಿಸುವ ಹಾಗು (ಬ್ಯಾಂಕ್ ಗ್ಯಾರಂಟಿಯನ್ನು ನಗದೀಕರಿಸಿ) ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರವನ್ನು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು ಕಾದಿರಿಸಿಕೊಂಡಿದೆ.

11.2 ಡೇರಿಯ ಆವರಣದಲ್ಲಿ ಡೇರಿಯು ವಹಿಸಿರುವ ಗುತ್ತಿಗೆ ಕೆಲಸವನ್ನು ಮಾತ್ರ ನಿರ್ವಹಿಸಲು ಗುತ್ತಿಗೆದಾರರು ಮತ್ತು ಅವರ ಕೆಲಸಗಾರರಿಗೆ ಅವಕಾಶ ನೀಡಲಾಗಿದ್ದರೂ ಡೇರಿಯ ಆವರಣದ ಮೇಲೆ ಗುತ್ತಿಗೆದಾರರಿಗೆ ಯಾವುದೇ ಹಕ್ಕು, ಸ್ವಾಮ್ಯ ಅಥವಾ ಧಾರಣಾಧಿಕಾರ ಇರುವುದಿಲ್ಲ. ಗುತ್ತಿಗೆದಾರರು ಮತ್ತು ಅವರ ಕೆಲಸಗಾರರು ಡೇರಿಯ ವಿವೇಚನೆಯ ಮೇರೆಗೆ ಡೇರಿಯ ಆವರಣವನ್ನು ತೆರವುಗೊಳಿಸಿ ಹೊರಹೋಗಬೇಕು. ಗುತ್ತಿಗೆದಾರರು ಅಥವಾ ಗುತ್ತಿಗೆದಾರರ ಕೆಲಸಗಾರರಿಂದ ಡೇರಿಯ ಕೆಲಸಕಾರ್ಯಗಳಿಗೆ ತೊಂದರೆ ಉಂಟು ಮಾಡುವ ಬೆದರಿಕೆಯಿಂದಾಗಿ ಕೈಗಾರಿಕಾ ಸಂಬಂಧ ಸಮಸ್ಯೆ ಉದ್ಭವಿಸಿದಲ್ಲಿ ಗುತ್ತಿಗೆಯನ್ನು 24 ಘಂಟೆಯೊಳಗೆ ರದ್ದುಪಡಿಸಲಾಗುವುದು ಮತ್ತು ಗುತ್ತಿಗೆದಾರರು ಆ ಅವಧಿಯೊಳಗೆ ಕೆಲಸಕಾರ್ಯಗಳನ್ನು ನಿರ್ವಹಿಸಲು ಹೊಸ ಗುತ್ತಿಗೆದಾರರಿಗೆ/ವ್ಯವಸ್ಥೆಗೆ ಅವಕಾಶವಾಗುವಂತೆ ಡೇರಿಯ ಆವರಣವನ್ನು ತೆರವುಗೊಳಿಸಬೇಕು.

ಮೇಲಿನ ಷರತ್ತು/ನಿಬಂಧನೆಗಳನ್ನು ನಾನು ಒಪ್ಪಿರುತ್ತೇನೆ/ನಾವು ಒಪ್ಪಿರುತ್ತೇವೆ.

ಟೆಂಡರುದಾರರ ಸಹಿ ಮತ್ತು ಮೊಹರು

12.0 ಗುತ್ತಿಗೆಯ ಅವಧಿಯಲ್ಲಿ ಗುತ್ತಿಗೆಯನ್ನು ರದ್ದುಗೊಳಿಸುವುದು ಅವಶ್ಯವೆಂದು ಕಂಡು ಬಂದಲ್ಲಿ ಯಾವುದೇ ಕಾರಣವನ್ನು ನಮೂದಿಸದೆ ಲಿಖಿತ ನೋಟೀಸನ್ನು ನೀಡಿ ಅಥವ ನೀಡದೆ ಗುತ್ತಿಗೆಯನ್ನು ರದ್ದುಪಡಿಸುವ ಅಧಿಕಾರವನ್ನು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು ಕಾದಿರಿಸಿಕೊಂಡಿದೆ. ಈ ರೀತಿಯ ಸಂದರ್ಭಗಳಲ್ಲಿ ಗುತ್ತಿಗೆದಾರರು ಯಾವುದೆ ನಷ್ಟವನ್ನು / ಪರಿಹಾರವನ್ನು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದಿಂದ ಕೇಳುವಂತಿಲ್ಲ.

13.0 ಗುತ್ತಿಗೆ ಕೆಲಸಗಾರರಿಗೆ ವಿವಿಧ ಕಾನೂನುಗಳಲ್ಲಿ ನಿಗದಿಪಡಿಸಿದ ಸೌಲಭ್ಯ ಮತ್ತು ಸವಲತ್ತುಗಳನ್ನು ನೀಡುವುದು ಗುತ್ತಿಗೆದಾರರ ಶಾಸನಬದ್ಧ ಹೊಣೆಗಾರಿಕೆಯಾಗಿದ್ದರೂ ಅವುಗಳಿಗಿಂತ ಹೆಚ್ಚಿನ ಸೌಲಭ್ಯಗಳನ್ನು ನೀಡುವುದಾದಲ್ಲಿ ಸದರಿ ವೆಚ್ಚವನ್ನು ಗುತ್ತಿಗೆದಾರರೇ ಸ್ವತಃ ಭರಿಸಬೇಕು. ಆದಾಗ್ಯೂ ಎಲ್ಲೆಲ್ಲಿ ಅನ್ವಯಿಸುವುದೋ ಅಂತಹ ಸ್ಥಳಗಳಲ್ಲಿ ಆರೋಗ್ಯ ಮತ್ತು ನೈರ್ಮಲ್ಯ ಕಾಪಾಡುವ ದೃಷ್ಟಿಯಿಂದ ಮತ್ತು ಸುರಕ್ಷಾ ಕ್ರಮಗಳ ಅನುಷ್ಠಾನಗೊಳಿಸುವಲ್ಲಿ ಡೇರಿಯು ನೀಡುವ ಸಲಹೆ ಸೂಚನೆಗಳಂತೆ ವಸ್ತು ನೀತಿಯನ್ನು ಕಡ್ಡಾಯವಾಗಿ ಪಾಲಿಸಲು ಗುತ್ತಿಗೆದಾರರು ಜವಾಬ್ದಾರರಾಗಿರುತ್ತಾರೆ.

14.0 ಗುತ್ತಿಗೆದಾರರು ಒದಗಿಸುವ ಎಲ್ಲಾ ಕೆಲಸಗಾರರನ್ನು ಕಾನೂನಿನ್ವಯ ವೈದ್ಯಕೀಯ ತಪಾಸಣೆಗೆ ಒಳಪಡಿಸಿ ಅವರುಗಳ ಆರೋಗ್ಯ ದೃಢೀಕರಣ ಪತ್ರವನ್ನು ಪಡೆದಿರಬೇಕು. ಮಾತ್ರವಲ್ಲದೆ ಕೆಲಸಗಾರರು ತಮ್ಮ ದೈಹಿಕ/ವಸ್ತ್ರಗಳ ಸ್ವಚ್ಛತೆಯನ್ನು ಕಾಪಾಡಿ ಮುಖ ಕ್ಷೌರ ಮಾಡಿಸಿರಬೇಕು/ತಲೆಗೂದಲು/ಉಗುರು ಕತ್ತರಿಸಿರಬೇಕು. ಕೆಲಸಗಾರರು ಎಲೆ ಅಡಿಕೆ/ಬೀಡ/ತಂಬಾಕು/ಗುಟ್ಕಾ ಮುಂತಾದ ಜಗಿಯುವ ಪದಾರ್ಥಗಳನ್ನು ಹಾಗೂ ನಶ್ಯ ಸೇವನೆ, ಧೂಮಪಾನ, ಮಧ್ಯಪಾನ ಮಾಡಿ ಕೆಲಸಕ್ಕೆ ಬರಬಾರದು ಮತ್ತು ಇವುಗಳನ್ನು ಕೆಲಸದ ಅವಧಿಯಲ್ಲಿ ಮಾಡಬಾರದು. ತಪ್ಪಿದಲ್ಲಿ ಸೂಕ್ತ ದಂಡ ವಿಧಿಸಲಾಗುವುದು.

14.1 ಮಾನವ ದಿನಗಳ ಆಧಾರದ ಮೇಲೆ ಒದಗಿಸಿದ ಗುತ್ತಿಗೆ ಕಾರ್ಮಿಕರ ಹಾಜರಾತಿಯನ್ನು ವೇಳಾ ಕಚೇರಿ ವಿಭಾಗದಲ್ಲಿ ಪ್ರತಿ ಪಾಳಿಯಲ್ಲಿ ಪ್ರತ್ಯೇಕ ರಿಜಿಸ್ಟರ್‌ನಲ್ಲಿ ದಾಖಲಿಸಬೇಕು ವೇಳಾ ಕಚೇರಿಯಲ್ಲಿ ಇಟ್ಟಿರುವ ಹಾಜರಾತಿಗೂ ಈ ಎಲ್ಲಾ ದಾಖಲೆಗಳು ಪ್ರತಿ ಮಾಹೆ ಬಿಲ್‌ಗೆ ತಾಳೆಯಾಗಬೇಕು. ಗುತ್ತಿಗೆ ಕಾರ್ಮಿಕರಿಗೆ ಪ್ರತಿ ಮಾಹೆ 7ನೇ ತಾರೀಖಿನೊಳಗೆ ವೇತನವನ್ನು ಬ್ಯಾಂಕ್ ಮೂಲಕ ಪಾವತಿಸಿ, ವೇತನಕ್ಕೆ ಸಂಬಂದಿಸಿದ ದಾಖಲೆಗಳನ್ನು ಹಾಗೂ ಸಂಬಂಧಪಟ್ಟ ವಿಭಾಗಗಳ ಹಾಜರಾತಿ ದೃಡೀಕರಣದೊಂದಿಗೆ ಬಿಲ್ಲನ್ನು ಪಾವತಿಗಾಗಿ ಆಡಳಿತ ವಿಭಾಗಕ್ಕೆ ಸಲ್ಲಿಸುವುದು. ತಮ್ಮ ಕಾರ್ಮಿಕರಿಗೆ ಗುಣಮಟ್ಟದ ಎರಡು ಜೊತೆ ಸಮವಸ್ತ್ರವನ್ನು ಹಾಗೂ ಪ್ರತಿಯೊಬ್ಬ ಕಾರ್ಮಿಕರಿಗೂ, ಇ.ಪಿ.ಎಫ್ ಸಂಖ್ಯೆ ಹೊಂದಿರುವ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ವಿತರಿಸಬೇಕು ಹಾಗೂ ಪ್ರತಿ ಸಿಬ್ಬಂದಿಯು ಕರ್ತವ್ಯಕ್ಕೆ ಹಾಜರಾದಾಗ, ಸದರಿ ಕಾರ್ಡುಗಳನ್ನು ಕಡ್ಡಾಯವಾಗಿ ಧರಿಸುವಂತೆ ಕ್ರಮವಿಡಬೇಕು. ಗುತ್ತಿಗೆ ಕಾರ್ಮಿಕರು ನೀಡಲಾದ ಸಮವಸ್ತ್ರ ಮತ್ತು ಶೂ ಅನ್ನು ಕಡ್ಡಾಯವಾಗಿ ಧರಿಸಿಕೊಂಡು ಹಾಜರಾಗುವಂತೆ ಸೂಚಿಸುವುದು.

ಸಮವಸ್ತ್ರದ ಮೇಲೆ ಗುತ್ತಿಗೆದಾರರ ಹೆಸರು / ಲೊಗೊವನ್ನು ಮುದ್ರಿಸಿ ವಿತರಿಸಬೇಕು.

15.0 <u>ಅನ್ವಯಿಸುವ ಕಾಯ್ದೆಗಳು:-</u>

ಕಾರ್ಮಿಕ ಗುತ್ತಿಗೆದಾರರು ಈ ಕೆಳಕಂಡ ಕಾಯ್ದೆಗಳ ಹಾಗೂ ಕಾಲಕಾಲಕ್ಕೆ ಜಾರಿಯಲ್ಲಿರುವ ತಿದ್ದುಪಡಿ ಕಾಯ್ದೆಗಳ ಅನುಸಾರ ನಡೆದುಕೊಳ್ಳುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

ಅ) ಕಾಂಟ್ರಾಕ್ಟ್ ಲೇಬರ್ (ರೆಗ್ಯೂಲೇಶನ್ ಅಂಡ್ ಅಬಾಲಿಷನ್ ಆಕ್ಟ್)

ಆ) ಪೇಮೆಂಟ್ ಅಂಡ್ ವೇಜಸ್ ಆಕ್ಟ್

ಇ) ಇ.ಪಿ.ಎಫ್.ಅಂಡ್ ಎಫ್.ಪಿ.ಎಫ್ ಆಕ್ಟ್

ಈ) ವರ್ಕ್‌ಮನ್ ಕಾಂಪನ್‌ಪೇಷನ್ ಆಕ್ಟ್

ಉ) ಇನ್‌ಕಮ್ ಟ್ಯಾಕ್ಸ್ ಆಕ್ಟ್

ಊ) ಇ.ಎಸ್.ಐ ಆಕ್ಟ್

ಋ) ಪ್ರೋಫೆಷನಲ್ ಟ್ಯಾಕ್ಸ್ ಆಕ್ಟ್

ಮೇಲಿನ ಷರತ್ತು / ನಿಬಂಧನೆಗಳನ್ನು ನಾನು ಒಪ್ಪಿರುತ್ತೇನೆ / ನಾವು ಒಪ್ಪಿರುತ್ತೇವೆ.

ಟೆಂಡರುದಾರರ ಸಹಿ ಮತ್ತು ಮೋಹರು

ಎ) ಸರಕು ಮತ್ತು ಸೇವಾ ತೆರಿಗೆ ಆಕ್ಟ್

ಏ) ಬೋನಸ್ ಆಕ್ಟ್

ಐ) ಗ್ರಾಚೂಯಿಟಿ ಆಕ್ಟ್

ಒ) ಮತ್ತು ಕಾಲಕಾಲಕ್ಕೆ ಜಾರಿಯಲ್ಲಿರುವ ಕಾರ್ಮಿಕ ಗುತ್ತಿಗೆಗೆ ಅನ್ವಯಿಸುವ ಸರ್ಕಾರದ ಇತರೆ ಯಾವುದೇ ಕಾನೂನುಗಳು / ನಿಬಂಧನೆಗಳು.

ಓ) ಈ ಬಗ್ಗೆ ಕಾಲಕಾಲಕ್ಕೆ ನ್ಯಾಯಾಲಗಳು ನೀಡುವ ಆದೇಶಗಳನ್ನು ಪಾಲಿಸುವುದು.

16.0 ಗುತ್ತಿಗೆದಾರರು ಕಾಲಕಾಲಕ್ಕೆ ಜಾರಿಯಲ್ಲಿರುವ (ಜಿ.ಎಸ್.ಟಿ) ಸರಕು ಮತ್ತು ಸೇವಾ ತೆರಿಗೆನ್ನು ಸಂಬಂಧಿಸಿದ ಇಲಾಖೆಗೆ ಪಾವತಿಮಾಡಬೇಕು. ಪಾವತಿಸಿದ ಬಗ್ಗೆ ಸೂಕ್ತ ದಾಖಲೆಗಳನ್ನು ಒಕ್ಕೂಟಕ್ಕೆ ಒದಗಿಸದತಕ್ಕದ್ದು. ಸರಕು ಮತ್ತು ಸೇವಾತೆರಿಗೆ0ು ದಾಖಲಾತಿಗಳನ್ನು ಪ್ರತಿ ತಿಂಗಳು ಒಕ್ಕೂಟದ ಕಛೇರಿಗೆ ಸಲ್ಲಿಸಬೇಕಾಗಿರುತ್ತದೆ.

17.0 ಒಕ್ಕೂಟದ ಅಗತ್ಯತೆಗೆ ಅನುಗುಣವಾಗಿ ಐ.ಟಿ.ಐ. ಎಲೆಕ್ಟ್ರಿಕಲ್/ಎಲೆಕ್ಟ್ರಾನಿಕ್ಸ್/ಮೆಕ್ಯಾನಿಕಲ್ ವಿದ್ಯಾರ್ಹತೆಯೊಂದಿಗೆ ತರಬೇತಿ ಹೊಂದಿದ ಕನಿಷ್ಟ ಎರಡು ವರ್ಷಗಳ ಅನುಭವುಳ್ಳ ಅಪರೇಟರ್‌ಗಳನ್ನು ಹಾಗು ಇಬ್ಬರು ಅರ್ಹ ಸಮರ್ಥ ಮತ್ತು ನುರಿತ (ಕನಿಷ್ಟ 05 ವರ್ಷಗಳ ಕೆಲಸದ ಅನುಭವ ಇರುವ) ಡಿಪ್ಲೊಮ ವಿಧ್ಯಾರ್ಹತೆ (ಎಲೆಕ್ಟ್ರಿಕಲ್/ಎಲೆಕ್ಟ್ರಾನಿಕ್ಸ್/ಮೆಕ್ಯಾನಿಕಲ್) ಹೊಂದಿರುವ ಮೇಲ್ವಿಚಾರಕರನ್ನು ಒದಗಿಸತ್ತಕ್ಕದ್ದು.

ಶಿವಮೊಗ್ಗ ಡೇರಿ ಮತ್ತು ದಾವಣಗೆರೆ ಡೇರಿ0ುಲ್ಲಿ ಹಾಲು ಪ್ಯಾಕಿಂಗ್ ವಿಭಾಗಕ್ಕೆ ಒದಗಿಸಬೇಕಾದ ಕನಿಷ್ಟ ಆಪರೇಟಗಳ ಸಂಖ್ಯೆ ವಿವರ ಈ ಕಳಕಂಡಂತೆ ಇದೆ.

ಅ) **<u>ಶಿವಮೊಗ್ಗ ಡೇರಿ</u>( 21 ಆಪರೇಟರ್ )** **<u>ಆಪರೇಟರ್ಸ್</u>**

| | | | |
|---|---|---|---|
| 1. ಹಾಲು ಪ್ಯಾಕಿಂಗ್ | – | 5 ಸಂಖ್ಯೆ ಆಪರೇಟರ್ x 2 shift | = 10ಸಂಖ್ಯೆ ಆಪರೇಟರ್‌ಗಳು |
| 2. ಕೋಡಿಂಗ್ | – | 1 ಸಂಖ್ಯೆ ಆಪರೇಟರ್ x 2 shift | = 2 ಸಂಖ್ಯೆ ಆಪರೇಟರ್‌ಗಳು |
| 3. ಮೊಸರು ಮತ್ತು ಮಜ್ಜಿಗೆ ಪ್ಯಾಕಿಂಗ್ | – | 2 ಸಂಖ್ಯೆ ಆಪರೇಟರ್ x 2 shift | = 4 ಸಂಖ್ಯೆ ಆಪರೇಟರ್‌ಗಳು |
| 4. ತುಪ್ಪ ಪ್ಯಾಕಿಂಗ್ | – | 1 ಸಂಖ್ಯೆ ಆಪರೇಟರ್ x 2 shift | = 2 ಸಂಖ್ಯೆ ಆಪರೇಟರ್ |
| 5. ರಾತ್ರಿ ಪಾಳಿ | – | 1 ಸಂಖ್ಯೆ ಆಪರೇಟರ್ | = 1 ಸಂಖ್ಯೆ ಆಪರೇಟರ್ |
| 6. ಮೇಲ್ವಿಚಾರಕರು | – | 1 ಸಂಖ್ಯೆ ಆಪರೇಟರ್ x 2 shift | = 2 ಸಂಖ್ಯೆ ಆಪರೇಟರ್ |

**ಆ) <u>ದಾವಣಗೆರೆ ಡೇರಿ ( 07 ಆಪರೇಟರ್)</u>**

| | |
|---|---|
| **1.** ಹಾಲು, ಮೊಸರು ಮತ್ತು ಮಜ್ಜಿಗೆ ಪ್ಯಾಕಿಂಗ್ | = 06 ಸಂಖ್ಯೆ ಆಪರೇಟರ್‌ಗಳು |
| **2.** ಕೋಡಿಂಗ್ ಯಂತ್ರ ಚಾಲನೆ | **=** 01 ಸಂಖ್ಯೆ ಆಪರೇಟರ್‌ಗಳು |

**17.1** ಗುತ್ತಿಗೆಯನ್ನು ಪಡೆದ ತಕ್ಷಣ ಆಪರೇಟರ್‌ಗಳ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಸರ್ಟಿಫಿಕೇಟ್‌ಗಳನ್ನು ನೀಡುವುದು.

17.2 ಶಿವಮೊಗ್ಗ ಡೇರಿಯಲ್ಲಿ ಮೊಸರು ಮತ್ತು ಮಜ್ಜಿಗೆ ಪ್ಯಾಕಿಂಗ್ ಒಂದೇ ಪಾಳಿಯಲ್ಲಿ ಪೂರ್ಣಗೊಂಡ ಸಂದರ್ಭದಲ್ಲಿ ಸದರಿ ಆಪರೇಟರ್ ಹಾಲು ಪ್ಯಾಕಿಂಗ್ ವಿಭಾಗದಲ್ಲಿ ಕೆಲಸ ನಿರ್ವಹಿಸತಕ್ಕದ್ದು.

18.0 ಹಿಂದಿನ ನಡತೆ ಸರಿಯಿಲ್ಲದ ಕೆಲಸಗಾರರನ್ನು ಗುತ್ತಿಗೆದಾರರು ಡೇರಿಯ ಕೆಲಸಕ್ಕೆ ನಿಯೋಜಿಸಬಾರದು, ಗುತ್ತಿಗೆದಾರರು ಒದಗಿಸುವ ಕೆಲಸಗಾರರು ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವುದು ಕಂಡು ಬಂದಲ್ಲಿ ಅಥವಾ ನಡತೆ/ಕೆಲಸ ತೃಪ್ತಿಕರವಿಲ್ಲವೆಂದು ಒಕ್ಕೂಟವು ತಿಳಿಸಿದಲ್ಲಿ ಅಂತಹವರನ್ನು ಕೂಡಲೇ ಬದಲಾಯಿಸುವುದು. ಕೆಲಸಗಾರರು ಶಿಸ್ತಿನಿಂದ ಕಾರ್ಯನಿರ್ವಹಿಸುವಂತೆ ಸೂಕ್ತ ಕ್ರಮ ಕೈಗೊಳ್ಳಲು ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ.

ಮೇಲಿನ ಷರತ್ತು/ನಿಬಂಧನೆಗಳನ್ನು ನಾನು ಒಪ್ಪಿರುತ್ತೇನೆ/ನಾವು ಒಪ್ಪಿರುತ್ತೇವೆ.

ಟೆಂಡರುದಾರರ ಸಹಿ ಮತ್ತು ಮೊಹರು

19.0 ಗುತ್ತಿಗೆದಾರರು ಡೇರಿಯಿಂದ ಕೆಲಸಗಾರರ ಗುರುತಿನ ಸಂಖ್ಯೆ (ID)ಯನ್ನು ಪಡೆದು ತಮ್ಮ ಕೆಲಸಗಾರರ ಭಾವಚಿತ್ರವನ್ನು ಒಳಗೊಂಡ ಗುರುತಿನ ಚೀಟಿಯನ್ನು ಮತ್ತು ಪ್ರತಿ ತಿಂಗಳು ವೇತನ ಪಟ್ಟಿಯನ್ನು ನೀಡಬೇಕು. ಗುತ್ತಿಗೆದಾರರು ಕೆಲಸಗಾರರ ಹಾಜರಾತಿ ಪುಸ್ತಕ, ವೇತನ ಬಟವಾಡೆ ಪುಸ್ತಕ ಹಾಗೂ ಭಾವಚಿತ್ರದೊಂದಿಗೆ ವಿಳಾಸದ ವಿವರವನ್ನು, ಭವಿಷ್ಯ ನಿಧಿ, ರಾಜ್ಯ ನೌಕರರ ವಿಮಾವಂತಿಗೆ GH, EL & ಬೋನಸ್ ಪಾವತಿಯ ದಾಖಲಾತಿಗಳನು ಕಾನೂನಿನಂತೆ ಇಟ್ಟುಕೊಂಡು ಅಗತ್ಯ ಬಿದ್ದಲ್ಲಿ ಶಾಸನಬದ್ಧ ಪ್ರಾಧಿಕಾರ/ಒಕ್ಕೂಟದ ಪರಿಶೀಲನೆಗೆ ಸಲ್ಲಿಸಲು ಬದ್ಧರಾಗಿರಬೇಕು.

20.0 ಗುತ್ತಿಗೆದಾರರು ಕೆಲಸಗಾರರಿಗೆ ಪಾವತಿಸುವ ವೇತನದಲ್ಲಿ ಭವಿಷ್ಯನಿಧಿ ಮತ್ತು ನೌಕರರ ರಾಜ್ಯ ವಿಮೆ ವಂತಿಗೆಯನ್ನು ಕಟಾಯಿಸಿ, ಸಂಬಂಧಪಟ್ಟ ಇಲಾಖೆಗೆ ಮಾಲೀಕರ ವಂತಿಗೆಯೊಂದಿಗೆ ಪಾವತಿಸಲು ಬದ್ದರಿರುತ್ತಾರೆ. ಸದರಿ ವಂತಿಗೆ ಪಾವತಿಯಲ್ಲಿ ಸುಸ್ತಿದಾರರಾದಲ್ಲಿ ಅಥವಾ ವ್ಯತ್ಯಾಸವಾದಲ್ಲಿ ದಂಡ ಒಳಗೊಂಡು ತತ್ಪರಿಣಾಮ ಉದ್ಭವಿಸುವ ಪರಿಣಾಮಗಳಿಗೆ ಗುತ್ತಿಗೆದಾರರೇ ಜವಾಬ್ದಾರರಾಗಿರುತ್ತಾರೆ. ಡೇರಿಯು ಯಾವುದೇ ರೀತಿಯಲ್ಲಿ ಇದಕ್ಕೆ ಜವಾಬ್ದಾರವಲ್ಲ. ಅನಿವಾರ್ಯ ಸಂದರ್ಭಗಳಲ್ಲಿ ಭವಿಷ್ಯ ನಿಧಿ ಮತ್ತು ನೌಕರರ ರಾಜ್ಯ ವಿಮಾ ದೇಣಿಗೆಯನ್ನು ಗುತ್ತಿಗೆದಾರರ ಬಿಲ್‌ನಲ್ಲಿ ಕಟಾಯಿಸಿ ಸಂಬಂಧಿಸಿದವರಿಗೆ ಪಾವತಿಸಲು ಡೇರಿಯು ಅಧಿಕಾರ ಹೊಂದಿರುತ್ತದೆ. ಗುತ್ತಿಗೆದಾರರು ನಿಯೋಜಿಸುವ ಪ್ರತಿ ಒಬ್ಬ ಕೆಲಸಗಾರರಿಗೆ ಸಂಬಂಧಿಸಿದಂತೆ ಹಿಂದಿನ ತಿಂಗಳ ಭವಿಷ್ಯನಿಧಿ ಮತ್ತು ನೌಕರರ ರಾಜ್ಯ ವಿಮೆ ವಂತಿಗೆಯನ್ನು ಸಂಬಂಧಪಟ್ಟ ಇಲಾಖೆಗೆ ಪಾವತಿಸಿರುವ ಬಗ್ಗೆ ದಾಖಲಾತಿಗಳನ್ನು(Challan & ECR)ಪ್ರತಿ ತಿಂಗಳ ಬಿಲ್‌ನೊಂದಿಗೆ ಕಡ್ಡಾಯವಾಗಿ ಲಗತ್ತಿಸಿರಬೇಕು ಮತ್ತು ವೇತನದ ಪುಸ್ತಕವನ್ನು ಪರಿಶೀಲನೆಗೆ ಹಾಜರುಪಡಿಸಬೇಕು. ಇಲ್ಲದಿದ್ದಲ್ಲಿ ಹಣ ಪಾವತಿಸಲಾಗುವುದಿಲ್ಲ.

21.0 ಡೇರಿಯು ವಹಿಸುವ ಕೆಲಸವನ್ನು ಸಂಬಂಧಿಸಿದ ಅಧಿಕಾರಿಗಳ ಸೂಚನೆಯಂತೆ ನಿರ್ವಹಿಸುವುದು. ಗುತ್ತಿಗೆ ಕೆಲಸಗಾರರು ಕೆಲಸವಿರುವಾಗ ಮಾತ್ರ ಡೇರಿಯ ಆವರಣವನ್ನು ಪ್ರವೇಶಿಸುವುದು ಮತ್ತು ಕೆಲಸ ಇಲ್ಲದ ಅವಧಿಯಲ್ಲಿ ಡೇರಿ ಆವರಣದಲ್ಲಿ ಇರಬಾರದು. ಡೇರಿಯ ಆವರಣದ ಒಳಗೆ ಬರುವಾಗ ಮತ್ತು ಹೊರಗೆ ಹೋಗುವಾಗ ಭದ್ರತಾ ವಿಭಾಗ/ಅಧಿಕಾರಿಗಳ ತಪಾಸಣೆಗೆ ಒಳಪಡಬೇಕು.

22.0 ಡೇರಿಯ ಗುತ್ತಿಗೆದಾರರಿಗೆ ವಹಿಸಿದ ತುಂಡು ಗುತ್ತಿಗೆಯನ್ನು ಡೇರಿಯ ಸೂಚನೆಗಳಂತೆ ನಿರ್ವಹಿಸಲು ಗುತ್ತಿಗೆದಾರರು ನಿಯುಕ್ತಿಗೊಳಿಸುವ ಕೆಲಸಗಾರರ ಒಟ್ಟು ಸಂಖ್ಯೆ ಬಗ್ಗೆ ಗುತ್ತಿಗೆ ಕಾರ್ಮಿಕ (ನಿಯಂತ್ರಣ ಮತ್ತು ರದ್ಧತಿ) ಕಾಯಿದೆಯಲ್ಲಿ ನಮೂದಿಸಿರುವ ರೀತ್ಯಾ ನಮೂನೆ VI ರಲ್ಲಿ ಗುತ್ತಿಗೆ ಕಾರ್ಮಿಕ ಪರವಾನಗಿಯನ್ನು ಗುತ್ತಿಗೆ ಪಡೆದ 15 ದಿನಗಳೊಳಗೆ ಸಕ್ಷಮ ಪ್ರಾಧಿಕಾರದಿಂದ ಪಡೆದು ಡೇರಿಗೆ ಸಲ್ಲಿಸಬೇಕು. ನಿಯೋಜಿಸುವ ಕೆಲಸಗಾರರ ಸಂಖ್ಯೆಯಲ್ಲಿ ಮಾರ್ಪಾಡು ಆದಲ್ಲಿ ಗುತ್ತಿಗೆ ಕಾರ್ಮಿಕ ಪರವಾನಗಿಯಲ್ಲಿ ಸೂಕ್ತ ತಿದ್ದುಪಡಿ ಮಾಡಿ ಡೇರಿಗೆ ಸಲ್ಲಿಸಬೇಕು.

23.0 ಗುತ್ತಿಗೆ ಪಡೆದ ಟೆಂಡರುದಾರರು ತಾವು ವಹಿಸಿಕೊಳ್ಳುವ ಜವಾಬ್ದಾರಿ ಮತ್ತು ಬಾಧ್ಯತೆಗಳನ್ನು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಅವಶ್ಯಕತೆಗನುಗುಣವಾಗಿ ವಾರದ ರಜೆ ಮತ್ತು ಸಾರ್ವತ್ರಿಕ ರಜಾ ದಿನ ಒಳಗೊಂಡು ಎಲ್ಲಾ ದಿನಗಳಲ್ಲೂ ವಿವಿಧ ಪಾಳಿಗಳಲ್ಲಿ ತೃಪ್ತಿಕರವಾಗಿ ನಿರ್ವಹಿಸಲು ಅಗತ್ಯವಿರುವ 18 ವರ್ಷ ಪೂರ್ಣಗೊಂಡಿರುವ ದೈಹಿಕವಾಗಿ ಸಮರ್ಥರಾದ 20 ರಿಂದ 50 ರ ವಯೋಮಾನದ ಆರೋಗ್ಯವಂತ ನುರಿತ ಕೆಲಸಗಾರರನ್ನು ನಿಯುಕ್ತಿಗೊಳಿಸತಕ್ಕದ್ದು. ಎಲ್ಲಾ ಪಾಳಿಗಳಲ್ಲಿ ಕೆಲಸವನ್ನು ಉಸ್ತುವಾರಿ ಮಾಡಲು ಮತ್ತು ಪಾಳಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕೆಲಸಗಾರರನ್ನು ನಿಯಂತ್ರಿಸಲು ಕಡ್ಡಾಯವಾಗಿ ಇಬ್ಬರು ಅರ್ಹ ಸಮರ್ಥ ಮತ್ತು ನುರಿತ(ಕೆಲಸದ ಅನುಭವ ಇರುವ)ಡಿಪ್ಲೊಮ ವಿದ್ಯಾರ್ಹತೆ (ಎಲೆಕ್ಟ್ರಿಕಲ್/ಎಲೆಕ್ಟ್ರಾನಿಕ್ಸ್/ಮೆಕ್ಯಾನಿಕಲ್) ಹೊಂದಿರುವ ಸ್ಥಾಯಿ ಮೇಲ್ವಿಚಾರಕರನ್ನು ಹೊಂದಿದ್ದು ಪ್ರತಿ ಪಾಳಿಯಲ್ಲಿ ಅವಶ್ಯಕತೆಗನುಗುಣವಾಗಿ ಅಗತ್ಯವಿರುವ ಕೆಲಸಗಳನ್ನು ನಿಯೋಜಿಸುವ ಬಗ್ಗೆ ನಿಗಾ ಇಡಬೇಕು. ಅನಿವಾರ್ಯ ಸಂದರ್ಭಗಳಲ್ಲಿ ಪಾಳಿಯ ನಂತರವೂ ಕೆಲಸ ನಿರ್ವಹಿಸಬೇಕಾಗುತ್ತದೆ. ಹೆಚ್ಚುವರಿ ಅವಧಿ ಮತ್ತು ರಜಾ ದಿನಗಳಲ್ಲಿ ಕೆಲಸ ನಿರ್ವಹಿಸಿದ ಬಗ್ಗೆ ಅಥವ ಉತ್ಪಾದನೆ ಕಡಿಮೆಯಾದಲ್ಲಿ (ಸರಾಸರಿ ಅಂದಾಜು ದಿನವಹಿ ಪ್ರಾಮಾಣದ ವಿವರ ಬದಲಾವಣೆಗೆ ಒಳಪಟ್ಟಿರುತ್ತದೆ.) ಗುತ್ತಿಗೆದಾರರಿಗೆ ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದಿಂದ ಯಾವುದೇ ಹೆಚ್ಚುವರಿ ಹಣ ಪಾವತಿಸಲಾಗುವುದಿಲ್ಲ. ಆದ್ದರಿಂದ ಟೆಂಡರುದಾರರು ವಾಣಿಜ್ಯ ದರ ಅನುಸೂಚಿಯಲ್ಲಿ ದರವನ್ನು ನಮೂದಿಸುವಾಗ ಇದನ್ನೂ ಪರಿಗಣಿಸಬೇಕು.

ಮೇಲಿನ ಷರತ್ತು/ನಿಬಂಧನೆಗಳನ್ನು ನಾನು ಒಪ್ಪಿರುತ್ತೇನೆ/ನಾವು ಒಪ್ಪಿರುತ್ತೇವೆ.

ಟೆಂಡರುದಾರರ ಸಹಿ ಮತ್ತು ಮೋಹರು

24.0 ಗುತ್ತಿಗೆದಾರರು ಮತ್ತು ಅವರು ನಿಯೋಜಿಸುವ ಮೇಲ್ವಿಚಾರಕರು ಪ್ರತಿ ದಿನ ಎಲ್ಲಾ ಪಾಳಿಗಳಲ್ಲೂ ಕೆಲಸ ಪ್ರಾರಂಭಿಸುವ ಮೊದಲು ಸಂಬಂಧಿಸಿದ ಅಧಿಕಾರಿಗಳಿಂದ ಅಗತ್ಯವಾದ ಸೂಚನೆಗಳನ್ನು ಪಡೆಯಬೇಕು.

25.0 ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ವತಿಯಿಂದ ಪಡೆದ ಪ್ಯಾಕಿಂಗ್ ಯಂತ್ರ, ಯಂತ್ರ, ಉಪಕರಣ ಸಲಕರಣೆಗಳನ್ನು ಸುರಕ್ಷಿತವಾಗಿಟ್ಟು ಸೂಚಿಸಿದಾಗ ಪರಿಶೀಲನೆಗೆ ಹಾಜರುಪಡಿಸಬೇಕು. ಗುತ್ತಿಗೆ ಅವಧಿ ಮುಗಿದ ನಂತರ ಸುಸ್ಥಿತಿ (ಯಥಾವತ್ತ) ಹಿಂದಿರುಗಿಸಬೇಕು. ಗುತ್ತಿಗೆದಾರರು ತಮ್ಮ ಸೇವೆಯ ಭಾಗವಾಗಿ ಡೇರಿಯ ಖರ್ಚಿನಲ್ಲಿ ಅಗ್ನಿಶಾಮಕ ಉಪಕರಣಗಳನ್ನು ನಿರ್ವಹಿಸಬೇಕು ಮತ್ತು ಅಪಘಾತದ ಸಂದರ್ಭಗಳಲ್ಲಿ ಪ್ರಥಮ ಚಿಕಿತ್ಸೆಯ ಸೇವೆಗಳನ್ನು ಒದಗಿಸಬೇಕು.

26.0 ಒಪ್ಪಂದದಡಿಯಲ್ಲಿ ಗುತ್ತಿಗೆದಾರರಿಗೆ ಇರುವ ಬಾಧ್ಯತೆಗಳನ್ನು ಯಾವುದೇ ಸಮಯದಲ್ಲಿ ಪೂರೈಸಲು ಗುತ್ತಿಗೆದಾರರು ವಿಫಲರಾದಲ್ಲಿ ಅಥವಾ ಗುತ್ತಿಗೆದಾರರು ಒಪ್ಪಂದದಂತೆ ಕೆಲಸಕಾರ್ಯಗಳನ್ನು ಷರತ್ತಿಗನುಗುಣವಾಗಿ ನಿರ್ವಹಿಸಲು ವಿಫಲರಾದಲ್ಲಿ ಅಥವಾ ಗುತ್ತಿಗೆದಾರರು ಯಾವುದೇ ನೋಟಿಸ್ ನೀಡದೆ ಗುತ್ತಿಗೆ ನಿರ್ವಹಿಸುವುದನ್ನು ನಿಲ್ಲಿಸಿದಲ್ಲಿ ಅಥವಾ ಗುತ್ತಿಗೆಯ ಷರತ್ತು ಮತ್ತು ನಿಬಂಧನೆಗಳ ಉಲ್ಲಂಘನೆಗಾಗಿ ಅಥವಾ ತೃಪ್ತಿಕರ ಸೇವೆ ಒದಗಿಸದ ಪ್ರಯುಕ್ತ ಡೇರಿಯು ಗುತ್ತಿಗೆಯನ್ನು ರದ್ದುಪಡಿಸಿದಲ್ಲಿ ಅಥವಾ ಗುತ್ತಿಗೆಯ ಅವಧಿಯಲ್ಲಿ ಕರಾರಿನ ನಿರಾಕರಣೆ ಮಾಡಿದಲ್ಲಿ ಡೇರಿಯು ಇತರೇ ಹಕ್ಕುಗಳಿಗೆ ಬಾಧಕವಾಗದ ರೀತಿಯಲ್ಲಿ ಬೇರೆ ಏಜೆನ್ಸಿಯ ಮೂಲಕ ಬದಲಿ ವ್ಯವಸ್ಥೆ ಕೈಗೊಳ್ಳಲು ಅಧಿಕಾರ ಹೊಂದಿದ್ದು ಇದಕ್ಕೆ ತಗಲುವ ವೆಚ್ಚ ಒಳಗೊಂಡು ಡೇರಿಗೆ ಆಗುವ ನಷ್ಟದ ಮೊತ್ತ ಬರಬೇಕಾದ ಯಾವುದೇ ಬಾಕಿ, ಗುತ್ತಿಗೆದಾರರ ವಿರುದ್ಧ ನಿರ್ಧರಿಸಲಾದ ನಿಗದಿತ ಹಾನಿ ಪರಿಹಾರವನ್ನು ಸೂಕ್ತ ದಂಡದೊಂದಿಗೆ ಗುತ್ತಿಗೆದಾರರ ಬಾಕಿ ಇರುವ ಬಿಲ್‌ಗಳ ಮೊತ್ತದಿಂದ ಮತ್ತು ಅವಶ್ಯಕತೆ ಇದ್ದಲ್ಲಿ ಭದ್ರತಾ ಠೇವಣಿಯಿಂದ ಕಟಾಯಿಸಲಾಗುವುದು.

27.0 ಗುತ್ತಿಗೆ ಅವಧಿ ಮುಕ್ತಾಯಗೊಂಡ ಅಥವಾ ಗುತ್ತಿಗೆ ರದ್ದುಗೊಂಡ ಎರಡು ತಿಂಗಳ ನಂತರ ಡೇರಿಗೆ ಬರಬೇಕಾದ ಬಾಕಿಗಳನ್ನು ಮತ್ತು ಆಗಿರಬಹುದಾದ ನಷ್ಟವನ್ನು ಭದ್ರತಾ ಠೇವಣಿಯಾಗಿ ನೀಡಿದ ಬ್ಯಾಂಕ್ ಗ್ಯಾರಂಟಿಯ ಮೊತ್ತದಲ್ಲಿ ಕಡಿತ ಮಾಡಲಾಗುವುದು.

28.0 ಭದ್ರತಾ ಠೇವಣಿಯನ್ನು ಈ ಕೆಳಕಂಡ ಸಂದರ್ಭದಲ್ಲಿ ಮುಟ್ಟುಗೋಲು ಹಾಕಿಕೊಳ್ಳಬಹುದು / ಒಪ್ಪಂದದ ಯಾವುದೇ ಷರತ್ತು ಮತ್ತು ನಿಬಂಧನೆಗಳನ್ನು ಅಥವಾ ಇಡೀ ಒಪ್ಪಂದವನ್ನು ಪಾಲಿಸದಿದ್ದಲ್ಲಿ / ಪೂರೈಸದಿದ್ದಲ್ಲಿ ನಷ್ಟ ಭರ್ತಿ, ಹಾನಿ ಪರಿಹಾರ ಮತ್ತು ದಂಡವನ್ನು ವಸೂಲಿ ಮಾಡಲಾಗುವುದು.

- ಗುತ್ತಿಗೆದಾರರು ಕಾನೂನುಬದ್ಧವಾಗಿ ಸಲ್ಲಿಸಬೇಕಾದ ರಿಟರ್ನ್ಸ್‌ಗಳನ್ನು ಹಾಗು ಪಿ.ಎಫ್, ಇ.ಎಸ್.ಐ. ಮತ್ತು ಸರಕು ಸೇವಾ ತೆರಿಗೆ (ಜಿ.ಎಸ್.ಟಿ) ಇಲಾಖೆಗಳಿಂದ ಪರಿವೀಕ್ಷಣೆಗೆ ಒಳಪಡಿಸಿ ಅದರ ದಾಖಲೆಗಳನ್ನು ದೈವಾರ್ಷಿಕ ಅವಧಿ ಮುಗಿದ 01 ತಿಂಗಳೊಳಗಾಗಿ ಅಥವಾ ಗುತ್ತಿಗೆ ಅವಧಿ ಮುಗಿದ ಒಂದು ತಿಂಗಳ ಅವಧಿ ಒಳಗಾಗಿ ಸಲ್ಲಿಸಬೇಕು. ಅವುಗಳನ್ನು ಸಂಬಂಧಪಟ್ಟ ಇಲಾಖೆಗೆ ಸಲ್ಲಿಸಿ ಅದರ ದೃಢೀಕೃತ ಮತ್ತು ಪರಿವೀಕ್ಷಣಾ ಪ್ರತಿಗಳನ್ನು ಒಕ್ಕೂಟಕ್ಕೆ ಸಲ್ಲಿಸದ ನಂತರವೇ ಭದ್ರತಾ ಠೇವಣಿಯನ್ನು ವಾಪಸ್ಸು ಮಾಡಲಾಗುವುದು.
- ಕಾರ್ಮಿಕರಿಗೆ ಸಂಬಂದಿಸಿದಂತೆ ಭವಿಷ್ಯನಿಧಿ, ಇಎಸ್.ಐ, ಮುಂತಾದ ಶಾಸನಬದ್ದ ಪಾವತಿಗಳನ್ನು ಸಂಬಂದಿಸಿದ ಸಂಸ್ಥೆಗೆ ಪಾವತಿಸದಿದಲ್ಲಿ ಅಂತಹ ಮೊಬಲಗನ್ನು ಮತ್ತು ಅಂತಹ ಸಂಸ್ಥೆಗಳು ಕಾರ್ಮಿಕ ಗುತ್ತಿಗೆ ಸಂಬಂದಿಸಿದಂತೆ ವಿಧಿಸುವ ಯಾವುದೇ ದಂಡದ ಮೊತ್ತವನ್ನು
- ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೇ ಅಂತಿಮವಾಗಿರುತ್ತದೆ.
- ಪ್ಯಾಕಿಂಗ್ ಯಂತ್ರ, ಯಂತ್ರ, ಸಾಮಗ್ರಿಗಳನ್ನು ಸುಸ್ಥಿತಿ / ಯಥಾಸ್ಥಿತಿಯಲ್ಲಿ ಹಿಂದಿರುಗಿಸದೆ ಇದ್ದ ಪಕ್ಷದಲ್ಲಿ
- ಗುತ್ತಿಗೆಯನ್ನು ನಿರ್ವಹಿಸದೇ ಇದ್ದುದಕ್ಕಾಗಿ ಒಕ್ಕೂಟಕ್ಕೆ ಉಂಟಾಗಬಹುದಾದ ಯಾವುದೇ ನಷ್ಟಕ್ಕೆ,
- ಗುತ್ತಿಗೆದಾರನು ನಿಗದಿಪಡಿಸಿದ ಗುತ್ತಿಗೆ ಕೆಲಸಗಳಿಗೆ ಕಾರ್ಮಿಕರನ್ನು ಒದಗಿಸಲು ವಿಫಲವಾದಾಗ ಅಂತಹ ಸಂದರ್ಭದಲ್ಲಿ ಬೇರೆಯವರಿಂದ ಕೆಲಸ ನಿರ್ವಹಿಸಿದಾಗ, ಖರ್ಚಾದ ಒಟ್ಟು ಮೊತ್ತದ ವ್ಯತ್ಯಾಸದ ದರವನ್ನು ದಂಡದ ಮೊತ್ತದೊಂದಿಗೆ,

ಮೇಲಿನ ಷರತ್ತು / ನಿಬಂಧನೆಗಳನ್ನು ನಾನು ಒಪ್ಪಿರುತ್ತೇನೆ / ನಾವು ಒಪ್ಪಿರುತ್ತೇವೆ.

ಟೆಂಡರುದಾರರ ಸಹಿ ಮತ್ತು ಮೋಹರು

- ಒಕ್ಕೂಟಕ್ಕೆ ಹಾನಿಯುಂಟು ಮಾಡಿದಾಗ, ಸೋರುವಿಕೆಯಾದಾಗ, ಹಾಳಾದ ಕೆಲಸಗಳಿಗಾಗಿ ಅಥವಾ ಇನ್ನಾವುದೇ ಕಾರಣಗಳಿಗಾಗಿ ವ್ಯವಸ್ಥಾಪಕ ನಿರ್ದೇಶಕರು ವಿಧಿಸಿದ ದಂಡಗಳನ್ನು ಸಂದಾಯ ಮಾಡದೇ ಇರುವಂತಹ ಮೊತ್ತವನ್ನು,

29.0 ಗುತ್ತಿಗೆ ಅವಧಿಯಲ್ಲಿ ಡೇರಿಗೆ ಯಾವುದೇ ರೀತಿಯ ನಷ್ಟ / ಹಾನಿ ಉಂಟಾದಲ್ಲಿ ಹಾಗೂ ಗುತ್ತಿಗೆಗೆ ಸಂಬಂಧಿಸಿದಂತೆ ಕೆಲಸಗಳಿಂದಾಗಿ ಉದ್ಭವಿಸಬಹುದಾದ ಯಾವುದೇ ಬೇಡಿಕೆಯ ಯಾರಿಂದಲಾದರೂ ಡೇರಿಗೆ ಬಂದಲ್ಲಿ ಅದರಿಂದಾಗುವ ನಷ್ಟ / ಹಾನಿ ಭರ್ತಿ ಮಾಡಿಕೊಡಲು ಗುತ್ತಿಗೆದಾರರು ಬದ್ದರಿರುತ್ತಾರೆ. ಈ ಗುತ್ತಿಗೆ ಅವಧಿಯಲ್ಲಿ ಗುತ್ತಿಗೆದಾರರು ಅಥವಾ ಇವರಿಂದ ನಿಯೋಜಿತ ಮಾನವಶಕ್ತಿ ಪ್ರತ್ಯಕ್ಷವಾಗಿಯಾಗಲಿ ಅಥವಾ ಪರೋಕ್ಷವಾಗಿಯಾಗಲಿ, ಸ್ವಯಿಚ್ಛೆಯಿಂದಾಗಲಿ ಅಥವಾ ಅನ್ಯೆಚ್ಛಿಕವಾಗಿಯಾಗಲಿ ಕೈಗೊಳ್ಳುವ ಎಲ್ಲಾ ಕೃತ್ಯಗಳು ಅಥವಾ ಕಾರ್ಯಗಳು ಅಥವಾ ವಿಷಯಗಳು ಅಲ್ಲದೇ ವಿಫಲತೆಯಿಂದ ಅಥವಾ ನಿರ್ಲಕ್ಷದಿಂದ ಅಥವಾ ದುರ್ನಡತೆಯಿಂದ ಅಥವಾ ಕೆಲಸ ಮಾಡುವುದು ಅಥವಾ ಮಾಡದಿರುವುದು ಇವುಗಳಿಂದ ಉಂಟಾಗುವ ಎಲ್ಲಾ ಕೃತ್ಯಗಳು ಅಥವಾ ಕಾರ್ಯಗಳು ಅಥವಾ ವಿಷಯಗಳು ಇವುಗಳ ದೆಸೆಯಿಂದ ಡೇರಿಗೆ ನಷ್ಟ ಉಂಟಾದಲ್ಲಿ ಆ ನಷ್ಟ ಮೌಲ್ಯವನ್ನು ಗುತ್ತಿಗೆದಾರರು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟಕ್ಕೆ ಭರ್ತಿ ಮಾಡಿಕೊಡತಕ್ಕದ್ದು.

30.0 ಗುತ್ತಿಗೆದಾರರು ಕಡಿಮೆ ಮಾನವ ಸಂಪನ್ಮೂಲಗಳನ್ನು ನೀಡುವುದರಿಂದಾಗಿ / ಯಂತ್ರೋಪಕರಣಗಳ ಅಸಮರ್ಪಕ ಚಾಲನೆಯಿಂದಾಗಿ ಮಾರುಕಟ್ಟೆಗೆ ಸಕಾಲದಲ್ಲಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಸರಬರಾಜಿನಲ್ಲಿ ವ್ಯತ್ಯಯವಾದಲ್ಲಿ ಮಾರುಕಟ್ಟೆಯಲ್ಲಿನ ನಷ್ಟ ಹಾಗೂ ಸೂಕ್ತ ದಂಡವನ್ನು ತಮ್ಮ ಬಿಲ್‌ನಲ್ಲಿ ಕಠಾಯಿಸಲಾಗುವುದು. ಟೆಂಡರುದಾರರಿಗೆ ಡೇರಿಯಿಂದ ನೀಡಬಹುದಾದ ತುಂಡು ಗುತ್ತಿಗೆಯ ಕನಿಷ್ಟ ಪ್ರಮಾಣವನ್ನು ಖಾತರಿಪಡಿಸಿಲ್ಲ ಮತ್ತು ಯಾವುದೇ ಕೆಲಸ ಇಲ್ಲದಿದ್ದಾಗ ಯಾವುದೇ ರೀತಿಯ ಪರಿಹಾರವನ್ನು ಡೇರಿಯಿಂದ ನೀಡಲಾಗುವುದಿಲ್ಲ. ತುಂಡು ಗುತ್ತಿಗೆ ಕೆಲಸದ ಪ್ರಮಾಣವು ಡೇರಿಯ ಅವಶ್ಯಕತೆಯ ಮೇರೆಗೆ ಹಾಗೂ ಹಾಲಿನ ಸುಗ್ಗಿಯ ಕಾಲ ಮತ್ತು ಬೇಸಿಗೆ ಕಾಲಗಳಿಗೆ ಅನುಗುಣವಾಗಿ ಹಾಲು ಶೇಖರಣೆ ಮತ್ತು ಮಾರಾಟಕ್ಕೆ ಹೊಂದಿಕೊಂಡು ವ್ಯತ್ಯಾಸವಾಗಬಹುದು. ತುಂಡು ಗುತ್ತಿಗೆ ಕೆಲಸದ ಪರಿಮಾಣ ಹೊಂದಿಕೊಂಡು ಅವಶ್ಯಕತೆಯಿದ್ದಾಗ ಹೆಚ್ಚುವರಿ ಕೆಲಸವನ್ನು ನಿರ್ವಹಿಸಬೇಕಾಗಿರುತ್ತದೆ.

